# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 18, 2022

ಸಂಪುಟ : 49 ಸಂಚಿಕೆ : 126 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ವಿಶ್ವಕರ್ಮ ಸಮಾಜ ಇತರರಿಗೆ ಮಾದರಿ



## ಭಗವಾನ್ ವಿಶ್ವಕರ್ಮ ಮಹೋತ್ಸವದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್

ದಾವಣಗೆರೆ, ಸೆ. 17 - ಭಗವಾನ್ ದೇವ ಶಿಲ್ಪಿ ವಿಶ್ವಕರ್ಮರು ಜಗತ್ತಿಗೆ ನೀಡಿದ ಅಪಾರವಾದ ಕೊಡುಗೆಗಳನ್ನು ಸಮಾಜದವರು ಮುಂದುವರೆಸಿಕೊಂಡು ಹೋಗುತ್ತಿರುವುದು ಇತರೆ ಸಮುದಾಯಗಳಿಗೆ ಮಾದರಿಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹೇಳಿದರು.

ನಗರದ ಕಾಳಿಕಾದೇವಿ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದಿಂದ ಇಂದು ಹಮ್ಮಿಕೊಂಡಿದ್ದ ವಿಶ್ವಕರ್ಮ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೇಷ್ಠ ಕೆಲಸದ ಹಿಂದೆ ಪರಿಶುದ್ಧ ಮನಸ್ಸಿದ್ದರೆ ರಚನಾತ್ಮಕ ಕಾರ್ಯಗಳನ್ನು ಮಾಡಲು ಸಾಧ್ಯವಿದೆ. ವಾಸ್ತುಶಿಲ್ಪಿಗಳಾಗಲು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಭಗವಾನ್ ವಿಶ್ವಕರ್ಮರು ಮಾಡಿದ ಸಾಧನೆಗಳು ಅಮೋಘವಾದವುಗಳು. ಅವರೊಬ್ಬ ಶ್ರೇಷ್ಠ ವಾಸ್ತುಶಿಲ್ಪಿಯಾಗಿದ್ದರು ಎಂದರು.

ವಿಶ್ವಕರ್ಮ ಸಮಾಜದ ಮುಖಂಡರು ಮತ್ತು ಸಂಘಟಕರು ಸಮಾಜದ ಅಭಿವೃದ್ಧಿಗೆ ಕಂಕಣಬದ್ಧರಾಗಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಉಪನ್ಯಾಸ ನೀಡಿದ ಡಾ. ಜಿ.ಬಿ. ವೀರೇಶ್ ಆಚಾರ್ಯ ಅವರು, ವಿಶ್ವದಲ್ಲಿ ಭೂಮಿ, ನೀರು, ಗಾಳಿ ಏನೂ ಇಲ್ಲದ ಸಂದರ್ಭದಲ್ಲಿ ನಿರಾಕಾರ ರೂಪದಲ್ಲಿ ಅವಿರ್ಭವಿಸಿದ ಭಗವಾನ್ ವಿಶ್ವಕರ್ಮರು ಜಗತ್ತಿನ ಸೃಷ್ಟಿಕರ್ತರಾಗಿದ್ದಾರೆ ಎಂದರು.

ವಾಸ್ತುಶಿಲ್ಪಿಯಾಗಿದ್ದ ಭಗವಾನ್ ವಿಶ್ವಕರ್ಮರು ಮೊಟ್ಟ ಮೊದಲ ಬಾರಿಗೆ ಕಾಶಿ ವಿಶ್ವನಾಥ ದೇವಸ್ಥಾನವನ್ನು ನಿರ್ಮಿಸಿದರು. ನಂತರ ಪುರಿ ಜಗನ್ನಾಥ ದೇಗುಲ (2ನೇ ಪುಟಕ್ಕೆ)

# ಭಾರತಕ್ಕೆ ಕಾಲಿಟ್ಟ ಚೀತಾಗಳು

## ನಮೀಬಿಯಾದ ಚೀತಾಗಳನ್ನು ಮಧ್ಯ ಪ್ರದೇಶದ ಅಭಯಾರಣ್ಯದಲ್ಲಿ ಬಿಟ್ಟ ಪ್ರಧಾನಿ

ಭೂಪಾಲ್, ಸೆ. 17 – ನಮೀಬಿಯಾದಿಂದ ತರಿಸಲಾದ ಎಂಟು ಚೀತಾಗಳನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಧ್ಯ ಪ್ರದೇಶದ ಕುನೋ ರಾಷ್ಟ್ರೀಯ ಅಭಯಾರಣ್ಯದಲ್ಲಿ ಬಿಡುಗಡೆ ಮಾಡಿದ್ದಾರೆ. ದೇಶದಲ್ಲಿ ಕಣ್ಮರೆಯಾಗಿರುವ ಚೀತಾಗಳ ಸಂತತಿ ಮತ್ತೆ ಬೆಳೆಸಲು ಏಳು ದಶಕಗಳ ನಂತರ ಪ್ರಯತ್ನ ನಡೆಯುತ್ತಿದೆ.

ಪ್ರಧಾನಿ ಮೋದಿ ಅವರ 72ನೇ ಜನ್ಮದಿನಾಚರಣೆಯ ದಿನದಂದು ಚೀತಾಗಳನ್ನು ಅಭಯಾರಣ್ಯದಲ್ಲಿ ಬಿಡುಗಡೆ ಮಾಡಲಾಗಿದೆ. ಚೀತಾಗಳ ಬಿಡುಗಡೆ ಮಾಡಿದ ಪ್ರಧಾನಿ, ಪ್ರಾಣಿಗಳ ಚಿತ್ರ ತಾವೇ ತೆಗೆದರು.

ಐದು ಹೆಣ್ಣು ಹಾಗೂ ಮೂರು ಗಂಡು ಚೀತಾಗಳನ್ನು ನಮೀಬಿಯಾದಿಂದ ಗ್ವಾಲಿಯರ್‌ಗೆ ವಿಮಾನದ ಮೂಲಕ ತರಲಾಗಿತ್ತು. ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಚೀತಾಗಳನ್ನು ತರುವ ಈ ಯೋಜನೆಗೆ 'ಪ್ರಾಜೆಕ್ಟ್ ಚೀತಾ' ಎಂಬ ಹೆಸರಿಡಲಾಗಿದೆ.

ಬೆಳಿಗ್ಗೆ 11.30ರ ಸಮಯದಲ್ಲಿ ಪ್ರಧಾನಿ ಮೋದಿ ಅವರು ಚೀತಾಗಳನ್ನು ಅಭಯಾರಣ್ಯದಲ್ಲಿ ಬಿಡುಗಡೆ ಮಾಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸ್ಥಳೀಯ ಜನರ ಮೇಲಿನ ನಂಬಿಕೆಯಿಂದ ಚೀತಾಗಳನ್ನು ಇಲ್ಲಿಗೆ ತರಿಸಲಾಗಿದೆ. ನಿಮ್ಮ ಮೇಲೆ ಪೂರ್ಣ ನಂಬಿಕೆ ಇದೆ. ಜನರು ನನ್ನ ನಂಬಿಕೆ ಮುರಿಯುವುದಿಲ್ಲ ಎಂಬ ವಿಶ್ವಾಸ ಇದೆ ಎಂದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಚೀತಾಗಳನ್ನು ಬಿಡಲಾದ ಕೆ.ಎನ್.ಪಿ. ಅಭಯಾರಣ್ಯ 344.686 ಚದುರ ಮೈಲಿ ಪ್ರದೇಶದ್ದಾಗಿದೆ.

ಭಾರತದಲ್ಲಿ 1947ರ ವೇಳೆ ಛತ್ತೀಸ್‌ಘಡದ ಪ್ರದೇಶದಲ್ಲಿ ಚೀತಾಗಳು ಕಂಡಿದ್ದೇ ಕೊನೆ. ಚೀತಾಗಳು ಅವಸಾನಗೊಂಡಿವೆ ಎಂದು 1952ರಲ್ಲಿ ಪ್ರಕಟಿಸಲಾಗಿತ್ತು.

2009ರಲ್ಲಿ ಆಫ್ರಿಕಾದ ಚೀತಾಗಳನ್ನು ಭಾರತಕ್ಕೆ ತರುವ ಯೋಜನೆ ರೂಪಿಸಲಾಗಿತ್ತು. ಕಳೆದ ವರ್ಷ ನವೆಂಬರ್‌ನಲ್ಲೇ ಚೀತಾಗಳನ್ನು ತರಬೇಕಿತ್ತು. ಆದರೆ, ಕೊರೊನಾದಿಂದಾಗಿ ಯೋಜನೆಗೆ ಹಿನ್ನಡೆಯಾಗಿತ್ತು.

# ಆನ್‌ಲೈನ್‌ಗೆ ಆರ್‌ಟಿಒದ 58 ಸೇವೆ

ನವದೆಹಲಿ, ಸೆ. 17 – ಡಿ.ಎಲ್., ವಾಹನಗಳ ನೋಂದಣಿ ಹಾಗೂ ವಾಹನಗಳ ಮಾಲೀಕತ್ವ ಹಸ್ತಾಂತರ ಸೇರಿದಂತೆ ವಾಹನಗಳಿಗೆ ಸಂಬಂಧಿಸಿದ 58 ಸೇವೆಗಳನ್ನು ಆನ್‌ಲೈನ್‌ಗೆ ತರಲಾಗಿದೆ. ನಾಗರಿಕರು ಆಧಾರ್ ಮೂಲಕ ಈ ಸೇವೆಗಳನ್ನು ಪಡೆಯಬಹುದು.

ಈ ಸೇವೆಗಳು ಸಂಪರ್ಕ ರಹಿತ ಹಾಗೂ ಮುಖಾಮುಖಿ ಭೇಟಿ ರಹಿತವಾಗಿರುತ್ತವೆ. ಇವುಗಳು ನಾಗರಿಕರು ತ್ವರಿತವಾಗಿ ಸೇವೆ ಪಡೆಯಲು ನೆರವಾಗಲಿವೆ ಎಂದು ಕೇಂದ್ರ ಸಾರಿಗೆ ಸಚಿವಾಲಯ ತಿಳಿಸಿದೆ.

ಆನ್‌ಲೈನ್‌ನಲ್ಲೇ ಸೇವೆಗಳು ಲಭ್ಯವಾಗುವ ಕಾರಣ ಇನ್ನು ಮುಂದೆ ಪ್ರಾದೇಶಿಕ ಸಾರಿಗೆ ಕಚೇರಿ (ಆರ್.ಟಿ.ಒ.)ಗಳಿಗೆ ತೆರಳುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲಿದೆ. ಇದು ಆರ್.ಟಿ.ಒ. ಅಧಿಕಾರಿಗಳ ಕಾರ್ಯ ದಕ್ಷತೆಯನ್ನೂ ಹೆಚ್ಚಿಸಲಿದೆ.

ಕಲಿಕಾ ಅನುಮತಿ, ಚಾಲನಾ ಅನುಮತಿಯ ಪ್ರತಿ ಹಾಗೂ ವಾಹನ ಚಾಲನಾ ಪರೀಕ್ಷೆಯ ಅಗತ್ಯವಿರದೇ ಡಿ.ಎಲ್. ನವೀಕರಣದಂತಹ ಸೇವೆಗಳನ್ನು ಆಧಾರ್ ಮಾಹಿತಿ ಒದಗಿಸುವ ಮೂಲಕ ನಾಗರಿಕರು ತಾವೇ ಪಡೆಯಬಹುದು. ಅಂತರರಾಷ್ಟ್ರೀಯ ವಾಹನ ಚಾಲನಾ ಅನುಮತಿ, ವಿಳಾಸ ಬದಲಾವಣೆ, ಮೋಟಾರು ವಾಹನದ ಮಾಲೀಕತ್ವ ಬದಲಾವಣೆಯಂತಹ ಸೇವೆಗಳೂ ಆನ್‌ಲೈನ್ ಮೂಲಕ ಲಭ್ಯವಾಗಲಿವೆ.

ಆಧಾರ್ ಸಂಖ್ಯೆ ಲಭ್ಯವಿಲ್ಲದ ವ್ಯಕ್ತಿಗಳು, ಪರ್ಯಾಯ ದಾಖಲೆಗಳನ್ನು ಸಿಎಂವಿಆರ್ 1989ರ ಕಾಯ್ದೆಯ ಅನ್ವಯ ನೇರವಾಗಿ ಸಲ್ಲಿಸಿ ಸೇವೆ ಪಡೆಯಬಹುದು.

# ದೂಡಾಗೆ ಜಮೀನು ನೀಡದಿರಲು ಕುಂದುವಾಡ ರೈತರ ನಿರ್ಧಾರ

ದಾವಣಗೆರೆ, ಸೆ. 17- ವಸತಿ ನಿರ್ಮಾಣಕ್ಕಾಗಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಗುಂಟೆ ಜಮೀನನ್ನೂ ಕೊಡುವುದಿಲ್ಲ ಎಂದು ಕುಂದುವಾಡ ಗ್ರಾಮಸ್ಥರು ಹೇಳಿದ್ದಾರೆ.

ರಕ್ತ ಕೊಟ್ಟೇವು ಆದರೆ ಜಮೀನು ಕೊಡಲ್ಲ. ಬೇಕಾದ್ದು ಆಗಲಿ. ಸರ್ಕಾರದೊಂದಿಗೆ ಯಾವುದೇ ವ್ಯವಹಾರ ನಡೆಸುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಸುಮಾರು 42 ರೈತರು ಸ್ಪಷ್ಟಪಡಿಸಿದ್ದಾರೆ.

ಎರಡ್ಮೂರು ವರ್ಷಗಳ ಹಿಂದೆ ಬೇರೆ ಕಡೆ ಜಮೀನು ಕಡಿಮೆ ದರದಲ್ಲಿ ಸಿಗುತ್ತಿತ್ತು. ಈಗ ಎಲ್ಲೆಡೆ ಜಮೀನು ದರ ದುಪ್ಪಟ್ಟಾಗಿದೆ. ಈ ಹಿನ್ನೆಲೆಯಲ್ಲಿ ಕುಟುಂಬಸ್ಥರು ಒಪ್ಪುತ್ತಿಲ್ಲ. ಹೀಗಾಗಿ ದೂಡಾ ತನ್ನ ಮೂರು ವರ್ಷದ ಈ ಪಕ್ರಿಯೆ ಕೈ ಬಿಡಬೇಕು. ರೈತರಿಗೆ ತೊಂದರೆ ನೀಡಿದರೆ ಉಗ್ರ ಹೋರಾಟ ಮಾಡಬೇಕಾದೀತು ಎಂದು ಎಚ್ಚರಿಸಿದ್ದಾರೆ.

ರೈತ ಎನ್. ಮಲ್ಲಿಕಾರ್ಜುನ್ ಮಾತನಾಡಿ, 2019-20ರಲ್ಲಿ ವಸತಿ ನಿರ್ಮಾಣಕ್ಕೆ ನಿಮ್ಮ ಜಮೀನು ತೆಗೆದುಕೊಳ್ಳುತ್ತೇವೆ. ಎರಡ್ಮೂರು ತಿಂಗಳಲ್ಲಿ ಹಣ ಸಿಗುತ್ತದೆ ಎಂದು ಆಸೆ ತೋರಿಸಲಾಗಿತ್ತು. ಎಕರೆಗೆ 1.18 ಕೋಟಿ ರೂ. ನಿಗದಿಪಡಿಸಿದ್ದರು. ಅದಕ್ಕೆ ನಾವು ಒಪ್ಪಿರಲಿಲ್ಲ. ನಂತರ ಅಂದಿನ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪ್ರತಿ ಎಕರೆಗೆ 1.28 ಕೋಟಿ ರೂ. ಹಾಗೂ ಒಂದು ನಿವೇಶನ ಕೊಡುವ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಲಾಗಿತ್ತು.

ಅಂದು ಮೇ 31, 2022ರ ಒಳಗಾಗಿ ಖರೀದಿ ಮಾಡುವ ಪ್ರಸ್ತಾಪಕ್ಕೆ ಅಧಿಕಾರಿಗಳು ಒಪ್ಪಿಕೊಂಡಿದ್ದರು. ಆದರೆ ಖರೀದಿ ಪ್ರಕ್ರಿಯೆ (4ನೇ ಪುಟಕ್ಕೆ)

# ರೈತರ ಮನವೊಲಿಸಿ ವಿಮಾನ ನಿಲ್ದಾಣ, ಕೈಗಾರಿಕಾ ಕಾರಿಡಾರ್



ದಾವಣಗೆರೆ, ಸೆ. 16 - ವಿಮಾನ ನಿಲ್ದಾಣ ಹಾಗೂ ಕೈಗಾ ರಿಕಾ ಕಾರಿಡಾರ್‌ಗಳ ಯೋಜನೆ ಯನ್ನು ಜಾರಿಗೆ ತರಲಾಗುವುದು. ಈ ಯೋಜನ ಗಳಿಗೆ ಅಗತ್ಯ ಜಮೀನು ಪಡೆಯಲು ರೈತರ ಮನವೊಲಿಸಿ ಅವರ ಸಹಕಾರ ಪಡೆಯುತ್ತೇವೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ದಿವ್ಯಾಂಗ ವ್ಯಕ್ತಿಗಳ ಕೌಶಲ್ಯ ಅಭಿವೃದ್ಧಿ ಮತ್ತು ಸಬಲೀಕರಣ ಇಲಾಖೆಯ ದಾವಣಗೆರೆ ಪ್ರಾದೇಶಿಕ ಕೇಂದ್ರದ ಆಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ಆಯೋಜಿಸಲಾಗಿದ್ದ ದಿವ್ಯಾಂಗರಿಗೆ ಸಲಕರಣೆಗಳ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರದ ಆಡಿಪ್ ಯೋಜನೆಯಡಿ ಕಾರ್ಯಕ್ರಮ ಆಯೋಜಿಲಾಗಿತ್ತು.

ಯಾವುದೇ ಅಭಿವೃದ್ಧಿ ಯೋಜನೆಗೆ ಜಮೀನಿನ ಅಗತ್ಯ ಬರುತ್ತದೆ. ಈ ಯೋಜನೆಗಳಿಗೆ ಅಗತ್ಯ ಜಮೀನು ಪಡೆಯಲು ರೈತರೂ ಸಹಕರಿಸಬೇಕು. ಯೋಜನೆಗಳಿಗಾಗಿ ರೈತರ ಮನವೊಲಿಸುವ ಪ್ರಯತ್ನ ನಡೆಸುತ್ತೇವೆ. ಒಂದು ವೇಳೆ ರೈತರು ಜಮೀನು ನೀಡುವು ದಿಲ್ಲ ಎಂದಾದರೆ ಯೋಜನೆಯನ್ನು ಕೈ ಬಿಡುತ್ತೇವೆ ಎಂದವರು ತಿಳಿಸಿದರು.

ತಮ್ಮ ಅಧಿಕಾರವಧಿಯಲ್ಲಿ ಜಿಲ್ಲೆಯ 500 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಜಲಜೀವನ್ ಮಿಷನ್ ಯೋಜನೆಯಡಿ 350 (2ನೇ ಪುಟಕ್ಕೆ)

# ಯಡಿಯೂರಪ್ಪ ವಿರುದ್ಧ ಲೋಕಾಯುಕ್ತದಲ್ಲಿ ಎಫ್‌ಐಆರ್



ಬೆಂಗಳೂರು, ಸೆ. 17 – ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿ ಯೂರಪ್ಪ ವಿರುದ್ಧ ಲೋಕಾಯುಕ್ತದಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದ ಮೇರೆಗೆ ಯಡಿಯೂರಪ್ಪ ಅಷ್ಟೇ ಅಲ್ಲದೇ ಅವರ ಪುತ್ರ ಬಿ.ವೈ. ವಿಜಯೇಂದ್ರ ವಿರುದ್ಧವೂ ಎಫ್.ಐ.ಆರ್. ದಾಖಲಿಸಲಾಗಿದೆ.

ಬೆಂಗಳೂರು ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಶಶಿಧರ್ ಮರಡಿ, ಸಂಜಯ್, ಚಂದ್ರಕಾಂತ್ ರಾಮಲಿಂಗಂ, ಸಚಿವ ಎಸ್.ಟಿ. ಸೋಮಶೇಖರ್, ಜಿ.ಸಿ. ಪ್ರಕಾಶ್, ಕೆ. ರವಿ, ವಿರೂಪಾಕ್ಷಪ್ಪ ಯಮಕನಮರಡಿ ಸೇರಿ ಒಟ್ಟು 9 ಜನರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಅಧಿಕಾರ ದುರುಪಯೋಗ ಪಡಿಸಿಕೊಂಡು ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಗೆ (2ನೇ ಪುಟಕ್ಕೆ)

# ಬಿಎಸ್‌ವೈ ಕುಟುಂಬವನ್ನು ಆವರಿಸಿದ ಭ್ರಷ್ಟಾಚಾರ ಪ್ರಕರಣ

ಬೆಂಗಳೂರು, ಸೆ. 18 - ಬಿಡಿಎ ವತಿಯಿಂದ ವಸತಿ ಸಮುಚ್ಛಯ ನಿರ್ಮಾಣಕ್ಕೆ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಂತಿಮಗೊಳಿಸಿದ್ದ ಗುತ್ತಿಗೆಯನ್ನು ಮುಂದುವರೆಸುವುದಕ್ಕೆ ಒತ್ತಡ ಹೇರಿ ಬಹು ಕೋಟಿ ರೂಪಾಯಿ ಲಂಚ ಪಡೆದಿರುವ ಆರೋಪ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ (2ನೇ ಪುಟಕ್ಕೆ)

# ಕಲ್ಯಾಣ ಕರ್ನಾಟಕಕ್ಕೆ 5 ಸಾವಿರ ಕೋಟಿ

ಕಲಬುರಗಿ, ಸೆ. 16 - ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಮುಂದಿನ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆ.ಕೆ.ಆರ್.ಡಿ.ಬಿ.) ನೀಡು ತ್ತಿರುವ ಅನುದಾನವನ್ನು 3 ಸಾವಿರದಿಂದ ಕೋಟಿ ರೂ.ಗಳಿಂದ 5 ಸಾವಿರ ಕೋಟಿ ರೂ. ಗೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು. ನಗರದ ನೂತನ ವಿದ್ಯಾಲಯ ಮೈದಾನದಲ್ಲಿ (4ನೇ ಪುಟಕ್ಕೆ)


## ಹುಟ್ಟುಹಬ್ಬದ ಶುಭಾಶಯಗಳು



ಇಂದು ತಮ್ಮ 87ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಬಿ.ಎಂ. ರುದ್ರಮುನಿ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು : ಮಕ್ಕಳು, ಮೊಮ್ಮಕ್ಕಳು, ಸೊಸೆ, ಅಳಿಯ ಮತ್ತು ಅಪಾರ ಬಂಧು-ಮಿತ್ರರು.
ಬನ್ನಿಕಲ್ ಕುಟುಂಬಸ್ಥರು.




ಅಭಿವೃದ್ಧಿಯ ಹರಿಕಾರ, ಕ್ರೀಡೆ, ವಿದ್ಯೆ, ಉದ್ಯೋಗ ಸೌಲಭ್ಯಗಳನ್ನು ಒದಗಿಸಿ ಉತ್ತೇಜಿಸುತ್ತಿರುವ ಯುವಕರ ಪಾಲಿನ ಕಣ್ಮಣಿ, ಬಡವರ ಬಂಧು, ಕೊಡುಗೈ ದಾನಿ, ಮಧ್ಯ ಕರ್ನಾಟಕದ ದೊರೆ, ಹೃದಯ ಶ್ರೀಮಂತಿಕೆಯ ಜನನಾಯಕ, ಸ್ಮಾರ್ಟ್ ಸಿಟಿಯ ರೂವಾರಿ, ಮಾಜಿ ಸಚಿವರೂ ಆದ

ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಶ್ರೀಯುತರ 55ನೇ ಹುಟ್ಟುಹಬ್ಬದ ಪ್ರಯುಕ್ತ

### ರಕ್ತದಾನ ಅಭಿಯಾನ

ದಾವಣಗೆರೆ ಜಿಲ್ಲೆಯಾದ್ಯಂತ 5,555 ಸ್ವಯಂಪ್ರೇರಿತ ರಕ್ತದಾನಿಗಳ ಸಹಕಾರದೊಂದಿಗೆ ಎಸ್.ಎಸ್. ಹೈಟೆಕ್ ಆಸ್ಪತ್ರೆ, ಬಾಪೂಜಿ ಆಸ್ಪತ್ರೆಗಳಿಂದ ರಕ್ತದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಕ್ತದಾನಿಗಳು ಈ ಅಭಿಯಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಎಸ್.ಎಸ್.ಎಂ. ಅಭಿಮಾನಿಗಳ ಬಳಗದಿಂದ ವಿನಂತಿಸಲಾಗಿದೆ.

ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್
ಹಾಗೂ ಕೆ.ಟಿ.ಜೆ. ನಗರ, ದಾವಣಗೆರೆ

ದಿನಾಂಕ : 18-ಸೆಪ್ಟೆಂಬರ್-2022, ಭಾನುವಾರ
ಸಮಯ : ಬೆಳಿಗ್ಗೆ 10-30 ರಿಂದ
ಸ್ಥಳ : ಜಿಲ್ಲಾ ಕ್ರೀಡಾಂಗಣ, ಬಾಪೂಜಿ ಆಸ್ಪತ್ರೆ ರಸ್ತೆ, ದಾವಣಗೆರೆ.

Donate Blood Save Life



ರಕ್ತದಾನ ಮಾಡಿ, ನಾಲ್ಕು ಅತ್ಯಮೂಲ್ಯ ಜೀವಗಳನ್ನು ಉಳಿಸಿ



# ವಾರ ಭವಿಷ್ಯ

**ದಿನಾಂಕ : 18.09.2022 ರಿಂದ 24.09.2022**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಉದ್ಯೋಗದಲ್ಲಿ ಆಯವ್ಯಗಳು ಸಮವಾಗಿರುವುದರಿಂದ ಹೆಚ್ಚಿನ ಲಾಭದ ನಿರೀಕ್ಷೆ ಬೇಡ. ಕೌಟುಂಬಿಕ ವ್ಯಾಜ್ಯಗಳನ್ನು ಹಿರಿಯರ ಸಮಕ್ಷಮದಲ್ಲಿ ರಾಜೀ ಪಂಚಾಯ್ತಿಯೊಂದಿಗೆ ಬಗೆಹರಿಸಿಕೊಳ್ಳಿ, ಪ್ರಾಯಕ್ಕೆ ಬಂದ ಮಕ್ಕಳಿಗೆ ವಹಿಸಿದ್ದ ವ್ಯಾಪಾರ ವ್ಯವಹಾರಗಳಲ್ಲಿ ಅನೇಕ ಗೊಂದಲಗಳು ಕಾಣಿಸಿಕೊಳ್ಳಲಿದ್ದು, ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವುದರಿಂದ, ಅದನ್ನು ಸರಿಪಡಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಸಿಗಲಿರುವ ಅನುಕೂಲಗಳನ್ನು ಸದುಪಯೋಗಪಡಿಸಿಕೊಳ್ಳಿ, ಮೋಜು ಮಸ್ತಿಗಳಿಂದಾಗಿ ನರಸಂಬಂಧಿ ಅನಾರೋಗ್ಯ ಸಮಸ್ಯೆ, ಮಹಿಳೆಯರಿಗೆ ಉತ್ತಮ ದಿನಗಳು. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅನನುಭವಿಗಳಾದ ಉದ್ಯಮಿಗಳು ಕಂಡರಿಯದ ಕಂಪನಿಗಳಲ್ಲಿ ಬಂಡವಾಳ ಹೂಡುವುದಕ್ಕಿಂತ, ತಮ್ಮ ಪೂರ್ವಿಕರು ಈ ಹಿಂದೆ ಆರಂಭಿಸಿರುವ ವೃತ್ತಿಯಲ್ಲೇ ಮುಂದುವರೆಯುವುದು ಮೇಲು. ರಾಜಕೀಯ ರಂಗದಲ್ಲಿ ಉಂಟಾದ ಮಿಂಚಿನ ಸಂಚಲನದಿಂದಾಗಿ ಪಕ್ಷದ ವರಿಷ್ಠರಿಗೆ, ತೀವ್ರ ತಿರುಗಾಟವಾಗಲಿದೆ. ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಕಲ ಸವಲತ್ತುಗಳು ಸಿಗಲಿವೆ. ಪ್ರಭಾವಿ ವ್ಯಕ್ತಿಗಳ ವಸೂಲಿಯಿಂದಾಗಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಸರಿ ಹೋಗಲಿವೆ. ಮಗಳ ಮದುವೆ ವಿಚಾರದಲ್ಲಿ ಮಾತುಕತೆ ಮುಂದುವರೆಸಿ, ಆರ್ಥಿಕ ಪರಿಸ್ಥಿತಿ ಸಾಧಾರಣ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಅನಿರೀಕ್ಷಿತವಾಗಿ ಕಾರ್ಯಕ್ಷೇತ್ರದಲ್ಲಿ ತೀವ್ರ ಒತ್ತಡ, ನಿಮ್ಮ ಪ್ರಾಮಾಣಿಕತೆ ಕಂಡು ಮೇಲಾಧಿಕಾರಿಗಳು ಹೆಚ್ಚಿನ ಜವಾಬ್ದಾರಿ ವಹಿಸುವರು. ಸಾಹಿತಿಗಳ ಕೃತಿಗಳಿಗೆ ಹೆಚ್ಚಿನ ಬೇಡಿಕೆ ಬರಲಿದ್ದು, ಸಂಪಾದನೆಯೂ ಹೆಚ್ಚಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆ ಕಂಡುಬರಲಿದೆ ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ಬಂಧುಗಳೊಂದಿಗೆ ನಿಷ್ಠೂರವಾಗಿ ಮಾತನಾಡಿದರೆ, ನಿಮ್ಮ ಘನತೆಗೆ ಧಕ್ಕೆಬರಬಹುದು. ಕರ್ತವ್ಯ ನಿಮಿತ್ತ, ಕೆಲಕಾಲ ಪರಸ್ಥಳದಲ್ಲಿ ವಾಸ ಮಾಡಬೇಕಾಗಬಹುದು. ಕಿವಿ, ಮೂಗು ಮತ್ತು ಗಂಟಲು ವೈದ್ಯರುಗಳಿಗೆ ಬೇಡಿಕೆ, ಹಣಕಾಸಿನ ಪರಿಸ್ಥಿತಿ ಸಾಧಾರಣ. ಚಿಕ್ಕಮಕ್ಕಳ ಆರೋಗ್ಯದ ಕಡೆ ಗಮನವಿರಲಿ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಬಹುದಿನಗಳಿಂದ ಸೋಮಾರಿತನದಲ್ಲೇ ಸಾಗಿದ ನೀವು, ಈ ವಾರದಿಂದ ಅತ್ಯುತ್ಸಾಹದೊಂದಿಗೆ ಕರ್ತವ್ಯದಲ್ಲಿ ತೊಡಗುವಿರಿ. ಬಹುದಿನಗಳಿಂದ ನಿರೀಕ್ಷಿಸಿದ್ದ ಶುಭ ಸಮಾಚಾರವೊಂದು ಇಷ್ಟರಲ್ಲೇ ಕೇಳಿಬರಲಿದೆ. ಅವಿವಾಹಿತ ರಿಗೆ ಕಂಕಣ ಭಾಗ್ಯ, ಸಹೋದ್ಯೋಗಿಗಳೊಂದಿಗೆ, ಸಹಕರಿಸಿಕೊಂಡು ಹೋಗದಿದ್ದಲ್ಲಿ ನಿಮ್ಮ ವಿರುದ್ಧ ಪಿತೂರಿ ಮಾಡಬಹುದು. ವಿದ್ಯಾರ್ಥಿಗಳ ಭವಿಷ್ಯಕ್ಕೆ ಹಲವು ಅನುಕೂಲಗಳು ಒದಗಿಬರಲಿವೆ. ಶಸ್ತ್ರಚಿಕಿತ್ಸಾ ವೈದ್ಯರಿಗೆ, ಸಂಪಾದನೆ ಹೆಚ್ಚಲಿದೆ. ಸ್ವಂತ ಉದ್ಯೋಗ ಆರಂಭಿಸಿದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ. ಆಸ್ತಿ ಖರೀದಿ ವಿಚಾರವನ್ನು ಮುಂದೂಡುವುದು ಲೇಸು. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸಂಪಾದಾನೆ ಸಾಧಾರಣವಾಗಿರುವುದರಿಂದ ಖರ್ಚು-ವೆಚ್ಚಗಳ ಕಡೆ, ಗಮನ ಕೊಡುವುದು ಮೇಲು. ಪದವೀಧರರಿಗೆ ಸಾಧಾರಣ ವೇತನದ ನೌಕರಿ ಸಿಗಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿಯೇ ಮುಂದುವರೆಯುವುದು ಉತ್ತಮ, ಎಷ್ಟೇ ಆತ್ಮೀಯರಾಗಿದ್ದರೂ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಬೇಡಿ. ಸಮಾಜ ಸೇವೆಯಲ್ಲಿ ತೊಡಗಿಕೊಂಡವರಿಗೆ ಸಾರ್ವಜನಿಕವಾಗಿ ಸನ್ಮಾನವಾಗಲಿದೆ. ಮತ್ತೊಬ್ಬರ ಹಣಕಾಸಿನ ಸಮಸ್ಯೆಗಳಿಗೆ ಹೊಣೆಗಾರರಾಗಲು ಹೋಗಬೇಡಿ. ಮಹಿಳೆಯರು ಅಪರಿಚಿತರೊಂದಿಗೆ ಮಾಡುವ ವ್ಯವಹಾರದಿಂದಾಗಿ ಹಣಕಾಸು ಕಳೆದುಕೊಳ್ಳಬಹುದು. ಅನಿರೀಕ್ಷಿತವಾಗಿ ಪುಣ್ಯಕ್ಷೇತ್ರಗಳ ದರ್ಶನ, ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಕ್ಕಳು ಉದ್ಯೋಗಿಗಳಾಗಿದ್ದರೂ ಅವರಿಂದ ಮಾತ್ರ ನಿಮಗೇನೂ ಸಹಾಯ ದೊರಕದು. ಅನಾವಶ್ಯಕವಾಗಿ ಸಾಲಗಳನ್ನು ಮಾಡುವುದರಿಂದ ಅನೇಕ ಸಮಸ್ಯೆಗಳು ಎದುರಾಗಬಹುದು. ಸಾಧಾರಣ ಆದಾಯವಿದ್ದರೂ ದೈನಂದಿನ ಜೀವನ ನಿರ್ವಹಣೆಗೇನೂ ತೊಂದರೆಯಿಲ್ಲ. ಬಹಳ ದಿನಗಳ ನಂತರ ಹಳೇ ಮಿತ್ರರ ಭೇಟಿ, ಉದ್ಯಮಿಗಳು ಹೊಸ ಯೋಜನೆಗಳನ್ನು ಆರಂಭಿಸುವ ಮೊದಲು ಅದರ ಅರಿವಿರುವುದು ಮೇಲು. ಶಿಕ್ಷಣ ಇಲಾಖೆಯಲ್ಲಿರುವ ಮೇಲಾಧಿಕಾರಿಗಳಿಗೆ ಅನಿರೀಕ್ಷಿತವಾಗಿ ವರ್ಗಾವಣೆ, ಸನ್ನಿವೇಶದ ಅರಿವಿಲ್ಲದೆ ಮಾತನಾಡಲು ಹೋದಲ್ಲಿ ಅವಮಾನವಾಗುವುದು ಖಚಿತ. ಪ್ರಯಾಣದ ಪೂರ್ವಸಿದ್ಧತೆ ಇರಲಿ. ಬುಧ-ಗುರು-ಶುಕ್ರ-ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪಾಲುದಾರಿಕೆಯಲ್ಲಿ ನಡೆಸುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ, ಗೃಹ ಒಳಾಂಗಣ ವಿನ್ಯಾಸಕರಿಗೆ ಬೇಡಿಕೆ ಹೆಚ್ಚಲಿದೆ. ಕೈಗಾರಿಕೋದ್ಯಮಿಗಳು, ಕಾರ್ಖಾನೆಗಳಲ್ಲಿ ಹಲವು ಬದಲಾವಣೆ ಮಾಡಲು ಇಚ್ಛಿಸುವರು ಮನೆಯಲ್ಲಿ ಹಿರಿಯರು ಮಾಡಬಹುದಾದ ಕೆಲವು ಹಗರಣಗಳಿಂದಾಗಿ ಅನೇಕ ಕಾನೂನಾತ್ಮಕ ಸಮಸ್ಯೆಗಳುಂಟಾಗುವವು. ನೀವು ತೆಗೆದುಕೊಳ್ಳಲಿರುವ ನಿರ್ಧಾರಗಳು ಸಮಯೋಚಿತವಾಗಿಯೇ ಇರಲಿವೆ. ರಾಜಕೀಯ ವ್ಯಕ್ತಿಗಳು ಪಕ್ಷದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ವರಿಷ್ಠರ ಮರ್ಜಿ ಹಿಡಿಯದೇ ವಿಧಿಯಿಲ್ಲ. ಸಗಟು ವ್ಯಾಪಾರಿಗಳು ಅಪರಿಚಿತ ಮಧ್ಯ ವರ್ತಿಗಳ ಮಾತಿಗೆ ಮರುಳಾಗಿ ಭಾರೀ ಮೋಸ ಹೋಗುವ ಸಂಭವಿದೆ. ಗುರು ಚರಿತ್ರೆ ಪಾರಾಯಣ ಮಾಡಿ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಸಹೋದ್ಯೋಗಿಗಳು ಆಪಾದನೆಗಳನ್ನು ಮಾಡಿದರೂ ಮೇಲಾಧಿಕಾರಿಗಳಿಗೆ ನಿಮ್ಮ ಮೇಲಿರುವ ವಿಶ್ವಾಸದಿಂದಾಗಿ ಎಲ್ಲವೂ ಸರಿದೂಗಲಿವೆ. ನೀವು ತೆಗೆದುಕೊಳ್ಳಬಹುದಾದ ಪೌಷ್ಠಿಕ ಆಹಾರಗಳ ಬಗ್ಗೆ ವೈದ್ಯರ ಸಲಹೆ ಪಡೆಯುವುದು ಮೇಲು. ಅಪರೂಪಕ್ಕೆ ಭೇಟಿಯಾದ ಬಾಲ್ಯ ಸ್ನೇಹಿತರೊಂದಿಗೆ, ಕಳೆದ ದಿನಗಳ ಮೆಲುಕು ಹಾಕುವಿರಿ. ದಂಪತಿಗಳಲ್ಲಿ ಮೂಡಲಿರುವ ಭಿನ್ನಾಭಿಪ್ರಾಯಗಳು ಕ್ರಮೇಣ ಸರಿಹೋಗಲಿವೆ. ಆದಾಯ ಎಷ್ಟೇ ಉತ್ತಮವಾಗಿದ್ದರೂ, ಅಷ್ಟೇ ಪ್ರಮಾಣದ ಖರ್ಚೂ ಕೂಡ ಇರುವುದರಿಂದ ಉಳಿತಾಯದ ಬಗ್ಗೆ ಚಿಂತೆಬೇಡ. ಮಡದಿಯ ಆರೋಗ್ಯದಲ್ಲಿ ವ್ಯತ್ಯಾಸ, ಸಾಧು ಸಂತರ ಆಶೀರ್ವಾದ ಪಡೆಯಿರಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ವ್ಯವಹಾರದ ಕೆಲಸಗಳಿಂದಾಗಿ ಬಿಡುವಿಲ್ಲದೆ ದೇಹಶ್ರಮ, ನಿಮ್ಮ ಜೀವನ ಶೈಲಿಗೆ ತಕ್ಕಂತೆ ನಿರ್ಧಾರವನ್ನು ತೆಗೆದುಕೊಳ್ಳಿ, ಹಣದ ಒಳಹರಿವು ಮಂದಗತಿಯಲ್ಲಿ ಇದೆ. ತೆರಿಗೆ ತಜ್ಞರಿಗೆ, ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸ, ವ್ಯಾವಹಾರಿಕ ವಿಷಯದಲ್ಲಿ ಪ್ರಯತ್ನಗಳು ಈಗ ಫಲ ಕೊಡಲಾರಂಭಿಸುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಬೇಕಾದ ಪರಿಕರಗಳು ದೊರೆಯುತ್ತವೆ. ನಿಮ್ಮ ನಾಜೂಕಿನ ಮಾತುಗಳು ಸಹೋದ್ಯೋಗಿಗಳಿಗೆ ಸಂತಸ ಕೊಡುತ್ತವೆ. ಕ್ರೀಡಾಪಟುಗಳಿಗೆ ಉತ್ತಮ ಸಾಮರ್ಥ್ಯ ತೋರಿಸುವ ಅವಕಾಶ ದೊರೆಯುತ್ತದೆ. ಭಾನು-ಸೋಮ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಬಹಳ ಶ್ರಮಪಟ್ಟು ಕೆಲಸಮಾಡುವ ನಿಮಗೆ ಹಣದ ಬೆಲೆ ಚೆನ್ನಾಗಿಯೇ ತಿಳಿದಿದೆ. ಕಷ್ಟದಲ್ಲಿರುವ ಸೋದರನಿಗೆ ಸಹಾಯ ಮಾಡುವುದು ಉತ್ತಮವೇ, ಆದರೂ ಕೂಡ ಅದು ನಿಮ್ಮ ಇತಿಮಿತಿಯಲ್ಲಿರುವುದು ಮೇಲು. ಮನೆ ಕಟ್ಟುವ ಅಥವಾ ಆಸ್ತಿ ಖರೀದಿ ಮಾಡುವ ವಿಚಾರವನ್ನು ಸದ್ಯಕ್ಕೆ ಕೈಬಿಡುವುದು ಮೇಲು. ಸಂಶೋಧನಾ ರಂಗದಲ್ಲಿರುವವರಿಗೆ ತಾತ್ಕಾಲಿಕವಾಗಿ ಹಿನ್ನಡೆಯಾಗಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆ ಬೇಡ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡುಬರಲಿದೆ. ಸೋದರಿಯ ಮನೆಯಲ್ಲಿ ನಡೆಯಲಿರುವ ಶುಭ ಸಮಾರಂಭಕ್ಕೆ ಪರಿವಾರ ಸಮೇತ ಹೋಗಿ ಭಾಗವಹಿಸುವಿರಿ. ವಿಷ್ಣು ಸಹಸ್ರನಾಮ ಪಠಿಸಿರಿ. ಸೋಮ-ಗುರು-ಶನಿ-ಶುಭ ದಿನಗಳು,

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಸಂಪೂರ್ಣ ಯೋಜನಾ ಬದ್ಧವಾಗಿ ಆರಂಭಿಸಿರುವ ಉದ್ಯಮವು ಇನ್ನುಮುಂದೆ ಲಾಭದಾಯಕವಾಗಿ ಮುನ್ನಡೆಯಲಿದೆ. ಸೋದರನ ಆರೋಗ್ಯದಲ್ಲಿ ತುಸು ವ್ಯತ್ಯಾಸ, ಒಪ್ಪಿಕೊಂಡ ಜವಾಬ್ದಾರಿಗಳನ್ನು ನಿರ್ವಹಿಸುವ ಮೊದಲು, ಅದರ ಆಳಗಲದ ಅರಿವಿರಲಿ. ಉಪನ್ಯಾಸಕರಿಗೆ ಉತ್ತಮ ಅವಕಾಶಗಳು ದೊರೆಯಲಿದ್ದು, ಅವರ ಆದಾಯವೂ ಹೆಚ್ಚಲಿದೆ. ವಿಜ್ಞಾನಿಗಳ ಪ್ರಬಂಧಕ್ಕೆ ವಿದೇಶದಲ್ಲಿ ಹೆಚ್ಚಿನ ಮಾನ್ಯತೆ ದೊರೆಯಲಿದೆ. ಬಹುದಿನಗಳಿಂದ ಸಂತಾನ ನಿರೀಕ್ಷೆಯಲ್ಲಿದ್ದವರಿಗೆ ಇಷ್ಟರಲ್ಲೇ ಶುಭ ಸಮಾಚಾರವೊಂದು ಕೇಳಿ ಬರಲಿದೆ. ರೈತಾಪಿ ಜನರಿಗೆ ಸರ್ಕಾರದಿಂದ ನೆರವುಗಳು ದೊರೆಯಲಿವೆ. ಭಾನು-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವಿವಾದಾಸ್ಪದ ವಿಚಾರಗಳಲ್ಲಿ ತಲೆಹಾಕಬೇಡಿ, ವಾಹನ ರಿಪೇರಿ ಮಾಡುವವರಿಗೆ, ಹೆಚ್ಚಿನ ಸಂಪಾದನೆಯಾಗಲಿದೆ. ಅನುಭವಿಗಳಾದ ಹಿರಿಯರ ಮಾತನ್ನು ಕೇಳುವುದರಲ್ಲೇ ನಿಮ್ಮ ಹಿತವಡಗಿದೆ. ಕೃಷಿ ಭೂಮಿಯನ್ನು ವಿಸ್ತರಿಸಲು ಇದು ಸಕಾಲ. ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಹೊಂದಿಕೊಂಡು ಹೋಗುವುದು ಅನಿವಾರ್ಯ. ಮನೆಯಲ್ಲಿರುವ ಅಮೂಲ್ಯ ವಸ್ತುಗಳು ಕಳೆದು ಹೋಗದಂತೆ ಎಚ್ಚರ ವಹಿಸಿರಿ. ಹೂವು, ಹಣ್ಣು ಮತ್ತು ತರಕಾರಿ ವ್ಯಾಪಾರಿಗಳ ವಹಿವಾಟು ಹೆಚ್ಚಿದರೂ, ಲಾಭ ಮಾತ್ರ ಅಷ್ಟಕ್ಕಷ್ಟೇ, ವಿದ್ಯಾರ್ಥಿಗಳಿಗೆ ಮತ್ತು ರಾಜಕಾರಣಿಗಳಿಗೆ ಉತ್ತಮ ದಿನಗಳು. ಸೋಮ-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 18-9-2022 ನೇ ಭಾನುವಾರ ಮಧ್ಯಾಷ್ಟಮೀ, ದಿನಾಂಕ: 19-9-2022 ಭಾನುವಾರ ಅವಿಧವಾ ನವಮಿ, ದಿನಾಂಕ: 24-9-2022 ಶನಿವಾರ ಘಾತ ಚತುರ್ದಶಿ.**

# ಮನಸ್ಸುಗಳ ವಿಕಾರದಿಂದ ಸಮಾಜದ ಸ್ವಾಸ್ಥ್ಯ ಹಾಳು

## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರುಗಳ ವ್ಯಾಕುಲತೆ



ರಾಣೇಬೆನ್ನೂರು, ಸೆ.17- ಇಂದು ಮನಸುಗಳು ವಿಕೃತಗೊಳ್ಳುತ್ತಿವೆ. ಉಪಕಾರ ಸ್ಮರಣೆ ಕಡಿಮೆಯಾಗುತ್ತಿದೆ. ಸಮಾಜ ಸ್ವಾಸ್ಥ್ಯ ಕಳೆದುಕೊಳ್ಳುತ್ತಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಶ್ರೀಗಳು ಇಲ್ಲಿನ ಶಿವ ಹೈಸ್ಕೂಲ್‌ನಲ್ಲಿ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳ 30ನೇ ಶ್ರದ್ಧಾಂಜಲಿ ಸಮಾರಂಭ ಹಾಗೂ ಆರೋಗ್ಯ ಶಿಬಿರ ಉದ್ಘಾಟಿಸಿ, ಆಶೀರ್ವಚನ ನೀಡುತ್ತಿದ್ದರು.

ನಾಲ್ಕಾರು ದೃಷ್ಟಾಂತಗಳನ್ನು ಹೇಳಿ ನೆರೆದಿದ್ದ ಸಭಿಕರ ಹಾಗೂ ವಿದ್ಯಾರ್ಥಿಗಳಿಂದ ಬಂದ ಅಸ್ಪಷ್ಟತೆಯ ನಿಲುವುಗಳನ್ನು ಗಮನಿಸಿದ ಶ್ರೀಗಳು, ಬದುಕಿನಲ್ಲಿ ಸ್ಪಷ್ಟತೆ ಇಲ್ಲದ್ದರಿಂದ ಮತದಾನ ಶೇ.50 ಕ್ಕೆ ಇಳಿದಿದೆ. ಪ್ರಜಾಪ್ರಭುತ್ವಕ್ಕೆ ಇದು ಮಾರಕ ಎಂದು ನಗುತ್ತಲೇ ತಮ್ಮ ತೀವ್ರತರದ ಅಸಮಾಧಾನವನ್ನು ವ್ಯಕ್ತಪಡಿಸಿದರು. ಎಲ್ಲಾ ಧರ್ಮಿಯರ ರಕ್ತ ಒಂದೇ ಬಣ್ಣದ್ದಾಗಿದೆ. ಅದೇ ರೀತಿ ಎಲ್ಲರ ಜೊತೆ ಸಹಬಾಳ್ವೆ ಮಾಡುವುದು ಅವಶ್ಯವಿದೆ. ತಿಗಣಿಯಂತೆ ಮತ್ತೊಬ್ಬರ ರಕ್ತ ಹೀರದೆ, ರಕ್ತದಾನ ಮಾಡಿ. ಧರ್ಮದ ತಳಹದಿಯ ಮೇಲೆ ಬದುಕು ಕಟ್ಟಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಜಗದ್ಗುರುಗಳು ಕಲಿಕೊಟ್ಟರು ಎಂದು ಶ್ರೀಗಳು ನುಡಿದರು.

ಸಿರಿಗೆರೆ ಶ್ರೀಗಳು ಸೀನಿದರೆ ವಿಧಾನ ಸೌಧ ನಡಗುತ್ತದೆ ಎನ್ನುವ ಮಾತೊಂದು ಹಿಂದೆ ಕೇಳಿಬರುತ್ತಿತ್ತು. ಅಂತಹ ಶಕ್ತಿ, ವ್ಯಕ್ತಿತ್ವ ನಮ್ಮ ಹಿರಿಯಗುರುಗಳದ್ದಾಗಿತ್ತು. ದೈತ್ಯಾಕಾರದ ಸುಭಾಸಚಂದ್ರ ಭೋಸ್ ಅಂತವರು ಓರ್ವ ಕುಳ್ಳ ಮನುಷ್ಯ. ಹೊಸ ಮನಿ ಸಿದ್ದಪ್ಪ ಜೊತೆ ಫೋಟೋ ತೆಗೆಸಿ ಕೊಳ್ಳಲು ಬರುತ್ತಾರೆ. ಅಂಥಹ ಎತ್ತರದವರ ಹೆಸರಿನ ಈ ಶಾಲೆಯ ವಿದ್ಯಾರ್ಥಿಗಳು ಸಿದ್ದಪ್ಪನವರ ಎತ್ತರಕ್ಕೆ ಬೆಳೆಯಬೇಕು ಎಂಬ ಆಶಯವನ್ನು ಶ್ರೀಗಳು ವ್ಯಕ್ತಪಡಿಸಿದರು.

**ದೇವಮಾನವ :** ಸಮಾಜದ ಸರ್ವತೋಮುಖ ಅಭಿವೃದ್ಧಿಗೆ, ಸರ್ವ ಜನರ ಒಳಿತಿಗೆ ಜನಪರ ಕೆಲಸಗಳ ಚಿಂತನೆಯನ್ನು ಅಳವಡಿಸಿಕೊಂಡಿರುವ ಸಿರಿಗೆರೆ ಶ್ರೀಗಳು ದೇವಮಾನವರು ಎಂದು ಬಣ್ಣಿಸಿದ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಅವರು, ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ರಾಣೇಬೆನ್ನೂರು ಭಕ್ತರು 5 ಸಾವಿರ ಲೀಟರ್ ಎಣ್ಣೆ ಕೊಡುತ್ತಿದ್ದು, ಅವರೆಲ್ಲರಿಗೂ, ಸಮಸ್ತ ಜನತೆಗೂ ಶ್ರೀ ಗಳ ಆಶೀರ್ವಾದದಿಂದ ಒಳ್ಳೆಯದಾಗಲಿ ಎಂದು ಆಶಿಸಿದರು.

ಶಾಸಕ ಅರುಣಕುಮಾರ ಪೂಜಾರ್, ವಿ.ಪ ಸದಸ್ಯ ಆರ್.ಶಂಕರ್, ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ನರಸಗೊಂಡರ, ವರ್ತಕ ಸಂಘದ ಅಧ್ಯಕ್ಷ ಅಶೋಕ ಗಂಗನಗೌಡ್ರ, ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ಸಂಘಟಕ ಮಂಜುನಾಥ ಗೌಡಶಿವಣ್ಣನವರ, ಈರಣ್ಣ ಮಾಕನೂರ, ಜಿ.ಜಿ.ಹೊಟ್ಟಿಗೌಡ್ರ, ಸಮಾಜದ ಅಧ್ಯಕ್ಷ ಶಿವಪ್ಪ ನಂದೆಳ್ಳಿ ಮತ್ತಿತರರಿದ್ದರು.

## ಕ್ಷಯ ಮುಕ್ತ ಅಭಿಯಾನದಡಿ 9.5 ಲಕ್ಷ ರೋಗಿಗಳ ದತ್ತು

ನವದೆಹಲಿ, ಸೆ. 17 – ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆಪ್ಟೆಂಬರ್ 9ರಂದು ಆರಂಭಿಸಿದ್ದ ಕ್ಷಯ ಮುಕ್ತ ಭಾರತ ಅಭಿಯಾನದಡಿ, ಇದುವರೆಗೂ 9.5 ಲಕ್ಷ ಕ್ಷಯ ರೋಗಿಗಳನ್ನು ದತ್ತು ತೆಗೆದುಕೊಳ್ಳಲಾಗಿದೆ. ಸಮುದಾಯ ನೆರವು ಯೋಜನೆಯಡಿ ರೋಗಿಗಳನ್ನು ದತ್ತು ತೆಗೆದುಕೊಳ್ಳಲಾಗಿದೆ. ಈ ಯೋಜನೆಗಾಗಿ ನಿಕ್ಷಯ್ ಮಿತ್ರ ನೋಂದಣಿ ವ್ಯವಸ್ಥೆ ಆರಂಭಿಸಲಾಗಿದೆ. ವ್ಯಕ್ತಿಗಳು, ಸಂಘಟನೆಗಳು, ಕೈಗಾರಿಕೆಗಳು ಹಾಗೂ ಜನಪ್ರತಿನಿಧಿಗಳೂ ಸೇರಿದಂತೆ ಹಲವರು ರೋಗಿಗಳಿಗೆ ದತ್ತು ಮೂಲಕ ನೆರವು ನೀಡಬಹುದು.

## ಯಡಿಯೂರಪ್ಪ ವಿರುದ್ಧ ಎಫ್‌ಐಆರ್

(1ನೇ ಪುಟದಿಂದ) ಗುತ್ತಿಗೆ ನೀಡಿದ್ದಾರೆ ಎಂದು ಕಾರ್ಯಕರ್ತ ಟಿ.ಜೆ. ಅಬ್ರಾಹಂ ಅವರು ಖಾಸಗಿ ದೂರು ದಾಖಲಿಸಿದ್ದರು.

ಈ ಬಗ್ಗೆ ಪರಿಶೀಲನೆ ನಡೆಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ದೂರಿನ ತನಿಖೆಗೆ ಆದೇಶಿಸಿತ್ತು.

## ಚೀತಾಗಳು ಬಲು ವೇಗ, ಆದರೆ ಸ್ಥೈರ್ಯ ಕಡಿಮೆ

ನವದೆಹಲಿ, ಸೆ. 17 – ಚೀತಾಗಳು ವೇಗಕ್ಕಾಗಿ ಹೆಸರಾಗಿವೆ. ಇವುಗಳು ಬಹುತೇಕ ಕಾರುಗಳಿಗಿಂತ ವೇಗವಾಗಿ ಓಡಬಲ್ಲವು. ಆದರೆ, 30 ಸೆಕೆಂಡುಗಳಿಗೂ ಹೆಚ್ಚು ಕಾಲ ಈ ವೇಗ ಕಾಯ್ದುಕೊಳ್ಳಲು ಅವುಗಳಿಂದ ಸಾಧ್ಯವಾಗದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಧ್ಯ ಪ್ರದೇಶದ ಅಭಯಾರಣ್ಯದಲ್ಲಿ ಎಂಟು ಚೀತಾಗಳನ್ನು ಬಿಟ್ಟಿದ್ದಾರೆ. ಇದರಿಂದಾಗಿ ದೇಶದಲ್ಲಿ ಅವಸಾನಗೊಂಡಿದ್ದ ಚೀತಾಗಳ ಸಂತತಿ ಮತ್ತೆ ಬೆಳೆಯುವ ಅವಕಾಶ ದೊರೆತಿದೆ. ಚೀತಾಗಳ ಬಗ್ಗೆ ವಿವರ ನೀಡಿರುವ ದೆಹಲಿಯ ವನ್ಯಜೀವಿ ಪತ್ರಕರ್ತ ಹಾಗೂ ಲೇಖಕ ಕಬೀರ್ ಸಂಜಯ್, ಚೀತಾಗಳು ವೇಗಕ್ಕೆ ಹೆಸರಾಗಿವೆ. ಆದರೆ ಸಾಮರ್ಥ್ಯಕ್ಕೆ ಅಲ್ಲ ಎಂದಿದ್ದಾರೆ.

ಚೀತಾಗಳು 30 ಸೆಕೆಂಡಿಗೂ ಹೆಚ್ಚು ಕಾಲ ವೇಗ ಕಾಯ್ದುಕೊಳ್ಳಲು ಸಾಧ್ಯವಾಗದು. ಹೀಗಾಗಿ ಅವುಗಳು ಬೇಟೆಗೆ ಹೊರಟಾಗ ಯಶಸ್ಸು ಕಾಣುವ ಪ್ರಮಾಣ ಶೇ.40ರಿಂದ 50ರಷ್ಟು ಮಾತ್ರ ಎಂದವರು ಹೇಳಿದ್ದಾರೆ. ಚೀತಾಗಳು ಒಂದೊಮ್ಮೆ ಬೇಟೆಯಾಡು ವಲ್ಲಿ ಯಶಸ್ವಿ ಯಾದರೂ ಸಹ, ಸ್ವಲ್ಪ ಕಾಲ ಸುಧಾರಿಸಿ ಕೊಳ್ಳಬೇಕಾ ಗುತ್ತದೆ. ಅಷ್ಟರಲ್ಲೇ ಬೇರೆ ಮಾಂಸ ಭಕ್ಷಕ ಪ್ರಾಣಿಗಳು ಚೀತಾಗಳ ಬೇಟೆ ಕದಿಯುವ ಅವಕಾಶಗಳೂ ಇವೆ ಎಂದವರು ತಿಳಿಸಿದ್ದಾರೆ. ಚಿರತೆ, ಹೀನಾ ಹಾಗೂ ಕಾಡು ನಾಯಿಗಳಷ್ಟೇ ಏಕೆ ರಣಹದ್ದುಗಳೂ ಸಹ ಚೀತಾಗಳನ್ನು ಹಿಮ್ಮೆಟ್ಟಿಸಿ ಬೇಟೆ ಕದಿಯುತ್ತವೆ. ಚೀತಾಗಳಿಗೆ ಇತರೆ ದೊಡ್ಡ ಬೆಕ್ಕುಗಳ ಶಕ್ತಿ ಇಲ್ಲ ಎಂದು ಸಂಜಯ್ ಹೇಳಿದ್ದಾರೆ.

ಚೀತಾಗಳ ಇಡೀ ದೇಹ ವೇಗಕ್ಕಾಗಿ ರೂಪುಗೊಂಡಿದೆ. ಮೂತಿಯಿಂದ ಬಾಲದವರೆಗೆ ಎಲ್ಲವೂ ಅದರ ವೇಗದ ಓಟಕ್ಕೆ ಸಹಕಾರಿಯಾಗಿವೆ. ಆದರೆ, ದೇಹ ಮಾತ್ರ ಇತರೆ ಬೇಟೆ ಪ್ರಾಣಿಗಳಷ್ಟು ಸಶಕ್ತವಾಗಿಲ್ಲ. ಚೀತಾಗಳು ಕಾಡುಗಳಲ್ಲಿ 10-12 ವರ್ಷ ಬದುಕುತ್ತವೆ. ಆದರೆ, ಬಂಧನದಲ್ಲಿಸಿರಿದಾಗ 17-20 ವರ್ಷಗಳವರೆಗೆ ಬದುಕುತ್ತವೆ ಎಂದವರು ಹೇಳಿದ್ದಾರೆ.

## ಪ್ರಧಾನಿ ಮೋದಿ ಜನ್ಮದಿನ : ಹಣ್ಣು, ಬ್ರೆಡ್ ವಿತರಣೆ

ಹರಪನಹಳ್ಳಿ, ಸೆ.17- ಪ್ರಧಾನಿ ನರೇಂದ್ರ ಮೋದಿ 72ನೇ ಹುಟ್ಟು ಹಬ್ಬದ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ವಿವಿಧ ವಾರ್ಡ್‌ಗಳಲ್ಲಿ ಶಾಸಕ ಜಿ.ಕರುಣಾಕರ ರೆಡ್ಡಿ ಅವರು ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಎಚ್.ಎಂ.ಅಶೋಕ, ಸದಸ್ಯ ಎಂ.ಕೆ.ಜಾವೀದ್, ಆಸ್ಪತ್ರೆಯ ಆಡಳಿತಾಧಿಕಾರಿ ರಾಘವೇಂದ್ರ ದುರುಗೋಜಿ, ವೈದ್ಯರಾದ ಶಿವಕುಮಾರನಾಯ್ಕ, ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಆರ್.ಲೋಕೇಶ್, ಕೆಂಗಳ್ಳಿ ಪ್ರಕಾಶ್, ಕೆ.ಎಂ.ಪ್ರಾಣೇಶ್, ತಿಮ್ಮಣ್ಣ, ರವಿ, ಹೆಚ್.ಎಂ.ಕೊಟ್ರಯ್ಯ, ಮಹೇಶ ಪೂಜಾರ, ಯು.ಪಿ.ನಾಗರಾಜ, ಸೇರಿದಂತೆ ಇತರರು ಇದ್ದರು.


ಹರಪನಹಳ್ಳಿ

## ವಿಮಾನ ನಿಲ್ದಾಣ, ಕೈಗಾರಿಕಾ ಕಾರಿಡಾರ್



(1ನೇ ಪುಟದಿಂದ) ಗ್ರಾಮಗಳಿಗೆ ಈಗಾಗಲೇ ನಲ್ಲಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಇನ್ನೊಂದು ವರ್ಷದಲ್ಲಿ ಎಲ್ಲಾ ಹಳ್ಳಿಗಳು ನಲ್ಲಿ ನೀರು ಪಡೆಯಲಿವೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ್ಮ ದಿನದ ಅಂಗವಾಗಿ ದಿವ್ಯಾಂಗರಿಗೆ ಸಾಧನ ಸಲಕರಣೆ ಗಳನ್ನು ವಿತರಿಸುವ ಕಾರ್ಯಕ್ರಮ ಆಯೋಜಿಸ ಲಾಗಿದೆ. ಬರುವ ಡಿ.3ರಂದು ನಡೆಯಲಿರುವ ವಿಶ್ವ ದಿವ್ಯಾಂಗರ ದಿನಾಚರಣೆಯ ವೇಳೆಯೂ ಕಿಟ್ ವಿತರಣೆಯಾಗಲಿದೆ ಎಂದು ಸಿದ್ದೇಶ್ವರ ಹೇಳಿದರು.

ವೇದಿಕೆಯ ಮೇಲೆ ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಮಲೇರಿಯ ಅಧಿಕಾರಿ ಡಾ. ನಟರಾಜ್, ಸಿ.ಆರ್.ಸಿ. ನಿರ್ದೇಶಕ ಡಾ. ಉಮಾಶಂಕರ್ ಮೊಹಾಂತಿ, ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಕೆ.ಕೆ ಪ್ರಕಾಶ್, ದೂಡಾ ಮಾಜಿ ಅಧ್ಯಕ್ಷರಾದ ರಾಜನಹಳ್ಳಿ ಶಿವಕುಮಾರ್, ಯಶವಂತರಾವ್ ಜಾಧವ್ ಮತ್ತಿತರರು ಉಪಸ್ಥಿತರಿದ್ದರು.

**ಶೀಘ್ರುವೇ ಸಿ.ಆರ್.ಸಿ. ಕಟ್ಟಡದ ಕಾಮಗಾರಿ ಆರಂಭ :** 53 ಕೋಟಿ ರೂ.ಗಳಿಗೂ ಹೆಚ್ಚಿನ ವೆಚ್ಚದಲ್ಲಿ 12 ಎಕರೆ ಜಮೀನಿನಲ್ಲಿ ಸಿ.ಆರ್.ಸಿ. ಕೇಂದ್ರ ನಿರ್ಮಾಣವಾಗಲಿದೆ. ಇದಕ್ಕಾಗಿ 25 ಕೋಟಿ ರೂ. ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದು ಸಂಸದ ಸಿದ್ದೇಶ್ವರ ಹೇಳಿದ್ದಾರೆ.

ದೇಶದಲ್ಲಿ ಕೇವಲ 13 ಸಿ.ಆರ್.ಸಿ. ಕೇಂದ್ರಗಳಿವೆ. ಕರ್ನಾಟಕ ಹಾಗೂ ಗೋವಾ ರಾಜ್ಯಗಳನ್ನು ಸೇರಿ ದಾವಣಗೆರೆಯಲ್ಲಿ ಕೇಂದ್ರವಿದೆ. ಇದು ನಮ್ಮೆಲ್ಲರ ಹೆಮ್ಮೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಅಡಿಪ್ ಯೋಜನೆ ಅಡಿ ವಿವಿಧ ರೀತಿಯ ಸಾಧನ ಸಲಕರಣೆಗಳಾದ 180 ಟಿಎಲ್‌ಎಂ ಕಿಟ್‌ಗಳು, 72 ಜೋಡಿ ಶ್ರವಣ ಯಂತ್ರಗಳು, 5 ದ್ವಿಚಕ್ರ ಬೈಸಿಕಲ್‌ಗಳು ಒಟ್ಟು 257 ಸಹಾಯಕ ಸಾಧನಗಳನ್ನು ಸಂಸದರು ದಿವ್ಯಾಂಗರಿಗೆ ವಿತರಿಸಿದರು.

## ಎಸ್ಸೆಸ್ಸೆಂ ಜನ್ಮ ದಿನಕ್ಕೆ ಹರಿಹರದಿಂದ 10 ಸಾವಿರ ಜನ



**ಹರಿಹರದಲ್ಲಿ ಶಾಸಕ ರಾಮಪ್ಪ**

ಹರಿಹರ, ಸೆ. 17 - ದಾವಣಗೆರೆಯಲ್ಲಿ ಇದೇ ದಿನಾಂಕ 22 ರಂದು ಅದ್ದೂರಿಯಾಗಿ ನಡೆಯುವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಹುಟ್ಟು ಹಬ್ಬಕ್ಕೆ ಹರಿಹರ ತಾಲ್ಲೂಕಿನಿಂದ 10 ಸಾವಿರ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಶಾಸಕ ಎಸ್. ರಾಮಪ್ಪ ತಿಳಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮಾರಂಭಕ್ಕೆ ಬರಲು ಈಗಾಗಲೇ ಪಕ್ಷದ ಮುಖಂಡರ ಬಳಿ ಚರ್ಚೆ ನಡೆಸಿ ಸೂಕ್ತವಾದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ದಾವಣಗೆರೆಯ ಎಂ.ಬಿ.ಎ ಕಾಲೇಜು ಮೈದಾನದಲ್ಲಿ ನಡೆಯುವ ಎಸ್ಸೆಸ್ಸೆಂ ಹುಟ್ಟು ಹಬ್ಬಕ್ಕೆ ಚನ್ನಗಿರಿ, ಜಗಳೂರು, ಹರಪನಹಳ್ಳಿ, ಹೊನ್ನಾಳಿ, ಭಾಗದಿಂದ ಸುಮಾರು 50 ಸಾವಿರ ಮತ್ತು ಹರಿಹರ ತಾಲ್ಲೂಕಿನಿಂದ 5 ಸಾವಿರ ಕಾರ್ಯಕರ್ತರು, ಅಭಿಮಾನಿಗಳು ಪಾಲ್ಗೊಳ್ಳುತ್ತಾರೆ ಎಂದರು.

ಸಮಾರಂಭಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ, ಹೆಚ್.ಸಿ. ಮಹಾದೇವಪ್ಪ, ಜಮೀರ್ ಆಹ್ಮದ್, ಎಂ.ಸಿ. ವೇಣುಗೋಪಾಲ್, ಲಕ್ಷ್ಮಿ ಹೆಬ್ಬಾಳಕರ್, ಉಮಾಶ್ರೀ ಸೇರಿದಂತೆ ಇತರೆ ಗಣ್ಯರು ಭಾಗವಹಿಸಲಿದ್ದಾರೆ. ಸಮಾರಂಭವು ಶಾಸಕ ಶಾಮನೂರು ಶಿವಶಂಕರಪ್ಪ ನವರ ನೇತೃತ್ವದಲ್ಲಿ ನಡೆಯಲಿದೆ ಎಂದರು.

ವೇದಿಕೆಯ ಸಮಾರಂಭವು ಮಧ್ಯಾಹ್ನ 1 ಗಂಟೆಗೆ ಆರಂಭಗೊಳ್ಳಲಿದೆ. ಸಂಜೆ ಚಲನಚಿತ್ರ ನಟ ದರ್ಶನ್, ಹರಿಕೃಷ್ಣ ಇತರರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಈ ಸಂದರ್ಭದಲ್ಲಿ ವಿಜಯಕುಮಾರ್, ಮುದೇಗೌಡ್ರು ಗಿರೀಶ್, ಪ್ರಕಾಶ್ ಪಾಟೀಲ್, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ವಸಂತ್, ಬಾಬುಲಾಲ್, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಕೆ.ಪಿ.ಸಿ.ಸಿ. ಸದಸ್ಯ ಬಿ. ರೇವಣಸಿದ್ದಪ್ಪ, ಜಿಪಂ ಮಾಜಿ ಅಧ್ಯಕ್ಷ ಗೋವಿಂದ ರಡ್ಡಿ, ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ವಕೀಲರು, ನಂದಿಗಾವಿ ಶ್ರೀನಿವಾಸ್, ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿ ದೀಟೂರು ಮಹೇಶ್ವರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಅಭಿದಾಲಿ, ಎಪಿಎಂಸಿ ಮಾಜಿ ಅಧ್ಯಕ್ಷ ನರೇಂದ್ರ ಬೆಳ್ಳೂಡಿ, ಮಲೇಬೆನ್ನೂರು ಕೆ.ಪಿ. ಗಂಗಾಧರ್, ಕುಣೆಬೆಳಕೇರೆ ದೇವೇಂದ್ರಪ್ಪ, ಸಿ.ಎನ್. ಹುಲುಗೇಶ್, ಗುತ್ತೂರು ಹಾಲೇಶಗೌಡ, ಅರುಣ್ ಬೊಂಗಾಳೆ ಮತ್ತಿತರರು ಉಪಸ್ಥಿತರಿದ್ದರು.

## ಎಸ್ಸೆಸ್ಸೆಂ-55 : ನಗರದಲ್ಲಿ ಇಂದು ಅಂತರ್ ಜಿಲ್ಲಾ ಚದುರಂಗ ಸ್ಪರ್ಧೆ



ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 55ನೇ ವರ್ಷದ ಜನ್ಮದಿನದ ಅಂಗವಾಗಿ 19 ವರ್ಷದೊಳಗಿನ ವಯೋಮಿತಿ ಮಕ್ಕಳಿಗೆ 'ಅಂತರ್ ಜಿಲ್ಲಾ ಮಟ್ಟದ ಚದುರಂಗ' ಸ್ಪರ್ಧೆಯನ್ನು ಗುರುಭವನದಲ್ಲಿ ಇಂದು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಸಮಾರಂಭವನ್ನು ಬೆಳಿಗ್ಗೆ 10 ಗಂಟೆಗೆ ಅಥಣಿ ವೀರಣ್ಣ ಉದ್ಘಾಟಿಸಲಿದ್ದಾರೆ. ಆಲೂರು ಮಂಜುನಾಥ್, ವೆಂಕಟೇಶ್, ಅಣಬೇರು ಜಗದೀಶ್, ಡಿ.ಎನ್. ಜಗದೀಶ್, ಮಾಲತೇಶ್, ಪ್ರಶಾಂತ್ ಕುಮಾರ್ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ. ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಶಾಮನೂರು ಶಿವಶಂಕರಪ್ಪ, ಡಾ. ಪ್ರಭಾ ಮಲ್ಲಿಕಾರ್ಜುನ್, ಲಯನ್ಸ್ ಕ್ಲಬ್ ಅಧ್ಯಕ್ಷ ನಾಗಭೂಷಣ್ ಅವರುಗಳು ಮಕ್ಕಳಿಗೆ ಎಸ್ಸೆಸ್ಸೆಂ ಕಪ್ ಬಹುಮಾನ ವಿತರಣೆಯನ್ನು ಮಾಡಲಿದ್ದಾರೆ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಯುವರಾಜ್ ತಿಳಿಸಿದ್ದಾರೆ.

## ಬಿಎಸ್‌ವೈ : ಭ್ರಷ್ಟಾಚಾರ ಪ್ರಕರಣ

(1ನೇ ಪುಟದಿಂದ) ಅವರ ಕುಟುಂಬವನ್ನೇ ಸುತ್ತಿಕೊಂಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದಂತೆ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣದಲ್ಲಿ ಯಡಿಯೂರಪ್ಪ ಅವರ ಕುಟುಂಬದ ಐವರು ಆರೋಪಿಗಳಾಗಿದ್ದಾರೆ. ಮಗ, ಅಳಿಯ, ಮೊಮ್ಮಗ ಮತ್ತು ಮಗಳ ಅಳಿಯನ ಹೆಸರು ಆರೋಪಿಗಳ ಸಾಲಿನಲ್ಲಿದೆ.

## ವಿಶ್ವಕರ್ಮ ಸಮಾಜ ಮಾದರಿ

(1ನೇ ಪುಟದಿಂದ) ಸೇರಿದಂತೆ ವಿಶ್ವ ವಿಖ್ಯಾತ ದೇವಾಲಯಗಳ ನಿರ್ಮಾ ಣಕ್ಕೆ ಕಾರಣರಾದರು. ತದನಂತರ ಅಮರಶಿಲ್ಪಿ ಜಕಣಾಚಾರಿ ಮುಂದು ವರೆಸಿ ಕೊಂಡು ಬಂದರು ಎಂದು ಇತಿಹಾಸವನ್ನು ನೆನಪಿಸಿಕೊಟ್ಟರು.

ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಬಿ.ವಿ. ಶಿವಾನಂದ ಮಾತನಾಡಿ, ವಿಶ್ವಕರ್ಮ ಸಮಾಜ ದಲ್ಲಿ ಸಂಘಟನೆ ಹಾಗೂ ರಾಜಕೀಯ ಇಚ್ಛಾಶಕ್ತಿ ಕೊರತೆ ಇದೆ. ಸಂಘಟನೆ ಗಾಗಿ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದೇವೆ ಎಂದರು.

ನಾವೆಲ್ಲಾ ಹುಟ್ಟಿನಿಂದ ಇಂಜಿನಿಯರ್‌ಗಳು. ಎಲ್ಲಾ ಸಮಾಜದವರ ಪ್ರೀತಿಗೆ ಪಾತ್ರರಾದವರು. ಸಮಾಜ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಗತಿ ಕಾಣಬೇಕಾಗಿದೆ. ಇದಕ್ಕೆ ಸಮಾಜ ಬಾಂಧವರು ಸಂಘಟಿತರಾಗುವುದು ಮುಖ್ಯ ಎಂದು ಹೇಳಿದರು.

ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಬಸಾಪುರದ ನಾಗೇಂದ್ರಚಾರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಭಾಸ್ಕರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಸಮಾಜದ ಮುಖಂಡರಾದ ಪೂರ್ವಾಚಾರ್, ಬಿ. ಸಿದ್ದಾಚಾರ್, ಷಣ್ಮುಖಚಾರ್ ಮತ್ತಿತರರು ಉಪಸ್ಥಿತರಿದ್ದರು.

ಅಚ್ಯುತಾನಂದ ಪ್ರಾರ್ಥಿಸಿ, ನಾಡಗೀತೆ ಹಾಡಿದರು. ರವಿಚಂದ್ರ ಸ್ವಾಗತಿಸಿದರು. ಶಿವಾನಂದ ನಿರೂಪಿಸಿದರು.


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಸಂತೇಬೆನ್ನೂರು ಮಠದ (ಆಸಗೋಡು) ದಾವಣಗೆರೆ ವಿನೋಬನಗರ ವಾಸಿಯಾದ
**ದಿ. ಪಂಪಯ್ಯ ಎಸ್.ಎಂ ಶ್ರೀಮತಿ ಕಾಮಾಕ್ಷಮ್ಮ ಎಸ್.ಎಂ. ಮತ್ತು ಮಕ್ಕಳು ಹಾಗೂ ಧರ್ಮಪತ್ನಿ ಶ್ರೀಮತಿ ಪವಿತ್ರ ಎಸ್.ಎಂ. ಮತ್ತು ಮಗ ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 11.9.2022ನೇ ಭಾನುವಾರ ಬೆಳಗಿನ ಜಾವ 7.30ಕ್ಕೆ ನಮ್ಮ ಜೇಷ್ಠ ಪುತ್ರನಾದ
**ಶ್ರೀ ಎಸ್.ಎಂ.ಮಹದೇವಸ್ವಾಮಿ**
ಇವರು, ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ**ಯನ್ನು
ದಿನಾಂಕ 19.9.2022ನೇ ಸೋಮವಾರ ಬೆಳಿಗ್ಗೆ 12 ಕ್ಕೆ ವಿನೋಬನಗರದ 1ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ಎದುರುಗಡೆಯಿರುವ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಮಿನಿ ಕಲ್ಯಾಣ ಮಂಟಪದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಕಾಮಾಕ್ಷಮ್ಮ ಹಾಗೂ ಧರ್ಮಪತ್ನಿ ಶ್ರೀಮತಿ ಪವಿತ್ರ ಎಸ್.ಎಂ.ಮಗ ಎಸ್.ಎಂ.ಕೊಟ್ರೇಶ್ ಮತ್ತು ಸಹೋದರರು, ಸಹೋದರಿಯರು ಹಾಗೂ ಬಂಧು-ಮಿತ್ರರು.**
**ಮೊ : 9448666535, 9481854430**


**ಕರಿಯಪ್ಪರ ಹನುಮಂತಪ್ಪ ನಿಧನ**



ಹಳೆಕಡ್ಲೇಬಾಳು ಗ್ರಾಮದ ವಾಸಿ ಕರಿಯಪ್ಪರ ಹನುಮಂತಪ್ಪ (77) ಇವರು ದಿನಾಂಕ 17.9.2022ರ ಶನಿವಾರ ಸಂಜೆ 6.30 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.9.2022ರಂದು ಭಾನುವಾರ ಮಧ್ಯಾಹ್ನ 1 ಗಂಟೆಗೆ ಕಡ್ಲೇಬಾಳು ರುದ್ರಭೂಮಿಯಲ್ಲಿ ನೆರವೇರಲಿದೆ.

**ರಾಮಪ್ಪ ನಿಧನ**



ದಾವಣಗೆರೆ ಗಾಂಧಿನಗರ 5 ನೇ ಕ್ರಾಸ್ ವಾಸಿ ದಾವಣಗೆರೆ ವೈಭವ ಪತ್ರಿಕೆ ಸಂಪಾದಕ ಕೃಷ್ಣಮೂರ್ತಿ ಅವರ ತಂದೆ ರಾಮಪ್ಪ (83) ಇವರು ದಿನಾಂಕ 17.9.2022ರ ಶನಿವಾರ ರಾತ್ರಿ 10.50 ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.9.2022ರಂದು ಭಾನುವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.



ಎಸ್.ಎಸ್.ಎಂ. ಅಭಿಮಾನಿ ಬಳಗದ ವತಿಯಿಂದ

ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬಾಪೂಜಿ ಆಸ್ಪತ್ರೆ, ಬಾಪೂಜಿ ರಕ್ತನಿಧಿ ಕೇಂದ್ರ, ದಾವಣಗೆರೆ ಹಾಗೂ ಎಸ್.ಎಸ್.ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಎಸ್.ಎಸ್.ರಕ್ತನಿಧಿ ಕೇಂದ್ರ, ದಾವಣಗೆರೆ ಇವರ ಸಹಯೋಗದಲ್ಲಿ

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರ 55ನೇ ಹುಟ್ಟುಹಬ್ಬದ ಪ್ರಯುಕ್ತ ಬೃಹತ್ ರಕ್ತದಾನ ಅಭಿಯಾನ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಬಾಪೂಜಿ ಆಸ್ಪತ್ರೆ 08192-273850, ಎಸ್.ಎಸ್. ಆಸ್ಪತ್ರೆ: 08192-266016,
ಹರೀಶ್ ಕೆ.ಎಲ್.ಬಸಾಪುರ: 9964070830, ಎಂ.ಆರ್.ಮಾಲತೇಶ್: 9741633668, ರಮೇಶ್ ನಾಯಕ್: 9008133199

ಬದುಕಿರುವಾಗ ನಾವು ಮಾಡಬಹುದಾದಂತಹ ಜೀವದಾನ ಪ್ರಕ್ರಿಯೆ ಎಂದರೆ ರಕ್ತದಾನ





# ವಿಶ್ವಕರ್ಮರ ವಾಸ್ತುಶಿಲ್ಪ ಅಪಾರ



## ಹರಪನಹಳ್ಳಿ ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಸ್ಮರಣೆ

ಹರಪನಹಳ್ಳಿ, ಸೆ. 17 - ವಿಶ್ವಕರ್ಮ ಸಮುದಾಯದವರು ತಮ್ಮ ಮಕ್ಕಳಿಗೆ ಕರಕುಶಲ ವಿದ್ಯೆಯ ಜೊತೆಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲರಾಗಲು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದು ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಹೇಳಿದರು.

ಪಟ್ಟಣದ ತಾಲ್ಲೂಕು ಆಡಳಿತದಿಂದ ಅಯೋಜಿಸಿದ್ದ ಭಗವಾನ್ ವಿಶ್ವಕರ್ಮರ ಜಯಂತಿಯ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕರಕುಶಲ ಸಾಮಗ್ರಿಗಳು, ಲೋಹ, ಕಬ್ಬಿಣ, ದೇವರ ಮೂರ್ತಿ, ಚಿತ್ರಪಟಗಳು, ಗೃಹಬಳಕೆ, ಸ್ಮಾರಕಗಳ ನಿರ್ಮಾಣ ಕಾರ್ಯದಲ್ಲಿರುವ ವಿಶ್ವಕರ್ಮರ ಕಲೆಯ ಜೀವಂತಿಕೆಯಾಗಿದ್ದು, ಇಂದಿಗೂ ಅವರನ್ನು ವಾಸ್ತುಶಿಲ್ಪಿಗಳು ಎಂದರೆ ತಪ್ಪಗಲಾರದು. ವಿಶ್ವಕರ್ಮನು ವಿಶ್ವದ ಮೊದಲ ಎಂಜಿನಿಯರ್ ಆಗಿದ್ದು, ಅವರ ಸೂಕ್ಷ್ಮ ಕೆತ್ತನೆಯ ಕೆಲಸಗಳು ಸ್ಮರಣೀಯವಾಗಿರುತ್ತವೆ. ವಿಶ್ವವನ್ನು ವೈಭವೀಕರಿಸುವ ಸಾಂಸ್ಕೃತಿಕ ಪರಂಪರೆ, ಕಲೆ, ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಶ್ರೀ ವಿಶ್ವಕರ್ಮರ ಭಾವಚಿತ್ರಕ್ಕೆ ಶಾಸಕ ಜಿ.ಕರುಣಾಕರ ರೆಡ್ಡಿ ಪುಷ್ಪಾರ್ಚನೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಎಚ್.ಎಂ.ಅಶೋಕ್, ತಹಶೀಲ್ದಾರ ಡಾ.ಶಿವಕುಮಾರ ಬಿರಾದಾರ, ಡಿವೈಎಸ್‌ಪಿ ವಿ.ಎಸ್.ಹಾಲಮೂರ್ತಿ, ಸಿಪಿಐ ಕಮ್ಮಾರ ನಾಗ ರಾಜ, ಪಿಎಸ್ಐ ಸಿ.ಪ್ರಕಾಶ್, ಮುಖಂಡರಾದ ಎಲ್‌ಐಸಿ ಅಂಬಣ್ಣ, ರಂಗಾಪುರ ಬಸವರಾಜ, ಭರಮಪ್ಪ, ಕಲ್ಲಹಳ್ಳಿ ಗೋಣೆಪ್ಪ, ಡಿ. ನಾಗರಾಜ, ಮಂಜುನಾಥಚಾರಿ, ಹನುಮಂ ತಪ್ಪ, ಎಂ.ಮಲ್ಲೇಶ್, ವೀರಭದ್ರಪ್ಪ, ಕಾಳಚಾರಿ, ಮೌನೇಶ, ಮಾನಪ್ಪ, ಮಂಜುನಾಥ, ಸೇರಿದಂತೆ ಇತರರು ಇದ್ದರು.

# ಹರಿಹರದಲ್ಲಿ ಇಂದು ಹಿಂದೂ ಮಹಾಸಭಾ ಗಣೇಶ ವಿಸರ್ಜನೆ : ಬಿಗಿ ಬಂದೋಬಸ್ತ್

ಹರಿಹರ, ಸೆ. 17 - ಹಿಂದೂ ಮಹಾಸಭಾದ ಗಣೇಶ ವಿಸರ್ಜನೆ ಪ್ರಯುಕ್ತ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಗಾಗಿ ನಗರದಲ್ಲಿ ಶನಿವಾರ ಪೊಲೀಸ್ ಪರೇಡ್ ಮಾಡಲಾಯಿತು.

ಪೊಲೀಸ್ ಪಥಸಂಚಲನ ಮೆರವಣಿಗೆ ನಗರದ ಪೊಲೀಸ್ ಠಾಣೆಯ ಆವರಣದಿಂದ ಪ್ರಾರಂಭಗೊಂಡು. ರಾಜ ಬೀದಿಗಳಲ್ಲಿ ಸಂಚರಿಸಿತು.

ಈ ವೇಳೆ ಸಿಪಿಐ ಸತೀಶ್ ಕುಮಾರ್ ಮಾತನಾಡಿ, ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆಯ ಸಮಯದಲ್ಲಿ ಸಹಾಯಕ ಪೊಲೀಸ್ ಅಧೀಕ್ಷಕರು, 6 ಸಿಪಿಐ, 16 ಪಿಎಸ್ಐ, 19 ಎಎಸ್ಐ, 145 ಸಿಬ್ಬಂದಿಗಳು, 20 ಮಹಿಳಾ ಸಿಬ್ಬಂದಿಗಳು, 30 ಗೃಹ ರಕ್ಷಕ ದಳ ಸಿಬ್ಬಂದಿಗಳು, 2 ಕೆ.ಎಸ್.ಆರ್.ಪಿ. ತುಕಡಿ, 2 ಡಿ.ಎ.ಆರ್. ತುಕಡಿಗಳಿಂದ ಭದ್ರತೆಗೆ ಕಲ್ಪಿಸಲಾಗುವುದು ಎಂದು ಹೇಳಿದರು.

50 ಕ್ಕಿಂತ ಹೆಚ್ಚು ಸಿ.ಸಿ. ಕ್ಯಾಮರಾಗಳು, 2 ಡ್ರೋಣ್ ಕ್ಯಾಮರಾ ಹಾಗೂ 10 ಕ್ಕಿಂತ ಹೆಚ್ಚು ವಿಡಿಯೋ ಕ್ಯಾಮರಾ ಚಿತ್ರೀಕರಣವನ್ನು ಬಳಸಿಕೊಂಡು ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದು ಪಿಎಸ್ಐ ಶಂಕರ್ ಗೌಡ ಪಾಟೀಲ್ ತಿಳಿಸಿದರು.

ಈ ಸಂದರ್ಭದಲ್ಲಿ ಸಿಪಿಐಗಳಾದ ನಿಂಗನಗೌಡ ನೆಗಳೂರು, ಸತ್ಯನಾರಾಯಣ ಬಿಳಿಚೋಡು, ನಗರ ಠಾಣೆ ಪಿಎಸ್ಐ ಶಂಕರ್ ಗೌಡ ಪಾಟೀಲ್, ಚಿದಾನಂದ, ಮಲೇಬೆನ್ನೂರು ಪಿಎಸ್ಐ ಡಿ. ರವಿಕುಮಾರ್, ಗುತ್ತೂರು ಪೊಲೀಸ್ ಠಾಣೆಯ ಪಿಎಸ್ಐ ಅರವಿಂದ್, ಜಿಲಾನಿ ಅಬ್ದುಲ್ ಖಾದರ್, ರೂಪಾಬಾಯಿ, ಪೊಲೀಸ್ ಸಿಬ್ಬಂದಿಗಳಾದ ಮಂಜುನಾಥ್, ಸಿ.ಎಂ. ನಾಗರಾಜ್ ಶಿಂಗ್ರಿಹಳ್ಳಿ, ಕರಿಯಪ್ಪ, ದ್ವಾರಕೀಶ್, ರಿಜ್ವಾನ್, ಕಾಳಮ್ಮ, ಕವಿತಾ, ಸುಮಾ, ದಿಲೀಪ್, ಕಾಂತರಾಜ್, ಮಂಜುನಾಥ್ ಬಿ.ವಿ. ಮತ್ತಿತರರು ಹಾಜರಿದ್ದರು.

# ಕಲಿಕೆ ನಿರಂತರ ಪ್ರಕ್ರಿಯೆ : ಆರ್.ಬಿ. ವಸಂತಕುಮಾರಿ

ದಾವಣಗೆರೆ, ಸೆ. 17 - ಕಲಿಕೆ ನಿರಂತರ ಪ್ರಕ್ರಿಯೆಯಾಗಿದ್ದು, ವೈಜ್ಞಾನಿಕ ಕಾರ್ಯಾಗಾರದಲ್ಲಿ ಶಿಕ್ಷಕರು ಪಡೆದ ಜ್ಞಾನವನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ತಲುಪಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿಜ್ಞಾನ ವಿಷಯ ಪರಿವೀಕ್ಷಕಿ ಆರ್. ಬಿ. ವಸಂತಕುಮಾರಿ ಕರೆ ನೀಡಿದರು.

ನಗರದ ಕುಂದುವಾಡ ರಸ್ತೆಯ ಸಪ್ತಗಿರಿ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಶನಿವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ದಾವಣಗೆರೆ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ ಆಫ್ ಸ್ಕೂಲ್ಸ್ (ಡ್ಯಾಮ್ಸ್) ಮತ್ತು ಬೆಂಗಳೂರಿನ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಇವುಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಜ್ಞಾನ ಶಿಕ್ಷಕರ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನ ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವದ ಕಿಡಿ ಹೊತ್ತಿಸುವ ಮೂಲಕ ಅವರ ಭವಿಷ್ಯವನ್ನು ಉಜ್ವಲಗೊಳಿಸಬೇಕು. ಶಿಕ್ಷಣ ಇಲಾಖೆಯಿಂದ ನಡೆಯುವ ವೈಜ್ಞಾನಿಕ ಕಾರ್ಯಕ್ರಮಗಳಿಗೆ ಖಾಸಗಿ ಶಾಲೆಗಳ ಮಕ್ಕಳನ್ನು ಕಳುಹಿಸಿದರೆ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯುವುದರ ಜೊತೆಗೆ ಗುಣಮಟ್ಟದ ಶಿಕ್ಷಣ ಪಡೆಯಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಡ್ಯಾಮ್ಸ್ ಕಾರ್ಯದರ್ಶಿ ಶ್ರೀರಾಮಮೂರ್ತಿ ಮಾತನಾಡಿ, ಕೊರೊನಾ ನಂತರದಲ್ಲಿ ಮಕ್ಕಳಲ್ಲಿ ಮಬ್ಬು ಕವಿದಂತಾಗಿದೆ. ಹೀಗಾಗಿ, ಮಕ್ಕಳನ್ನು ತರಗತಿಯಲ್ಲಿ ಕೂರಿಸುವುದೇ ಸವಾಲಿನ ಕೆಲಸವಾಗಿದೆ. ಎರಡು ದಿನಗಳ ಈ ಕಾರ್ಯಾಗಾರದ ಸದುಪಯೋಗ ಪಡೆದುಕೊಂಡು ಮಕ್ಕಳನ್ನು ಚುರುಕುಗೊಳಿಸಬೇಕು ಎಂದರು.



## ವಿಜ್ಞಾನ ಶಿಕ್ಷಕರ ಕಾರ್ಯಾಗಾರ

ಪದವಿಪೂರ್ವ ಶಿಕ್ಷಣ ಪಡೆಯಲು ನಾನಾ ಭಾಗಗಳಿಂದ ದಾವಣಗೆರೆಯನ್ನು ಅರಸಿ ಬರುತ್ತಾರೆ. ಅದೇ ರೀತಿಯಲ್ಲಿ ಪ್ರೌಢ ಶಾಲೆಗಳು ಸಹ ಬೆಳೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕ.ರಾ.ವಿ.ಪ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ ಪ್ರಾಸ್ತಾವಿಕ ಮಾತನಾಡಿ, 21ನೇ ಶತಮಾನಕ್ಕೆ ಸ್ಪರ್ಧೆ ಒಡ್ಡುವಂತೆ ಶಿಕ್ಷಕರನ್ನು ತಯಾರಿಸಲು ಈ ಕಾರ್ಯಾಗಾರ ಏರ್ಪಡಿಸಲಾಗಿದೆ. ಇದರಿಂದ ಶಿಕ್ಷಕರಿಗೆ ಅತ್ಯುತ್ತಮ ಸೇವೆ ಸಲ್ಲಿಸಲು ಸಹಕಾರಿಯಾಗಲಿದೆ. ಪರಿಷತ್‌ನಿಂದ ನಡೆಯುವ ವಿಜ್ಞಾನ ರಸಪ್ರಶ್ನೆ, ವಿಜ್ಞಾನಗೋಷ್ಠಿ, ವಿಜ್ಞಾನ ವಸ್ತು ಪ್ರದರ್ಶನ, ವಿಜ್ಞಾನ ನಾಟಕ ಸ್ಪರ್ಧೆಗಳ ಸದುಪಯೋಗವನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಡೆಯಬೇಕು ಎಂದು ಸಲಹೆ ನೀಡಿದರು.

ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯ ಪದ್ಮಪ್ರಭು ಮತ್ತು ಕರೀಮಾ ಅಂಜುಮ್ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಡ್ಯಾಮ್ಸ್ ಉಪಾಧ್ಯಕ್ಷರಾದ ಆರ್.ಎಲ್. ಪ್ರಭಾಕರ್, ಸಂತೋಷಕುಮಾರ್ ಎಂ.ಎಸ್, ಸಹ ಕಾರ್ಯದರ್ಶಿ ಪ್ರಸನ್ನಕುಮಾರ್ ಎಂ.ಎಸ್ ಮತ್ತಿತರರಿದ್ದರು.

# ಆಭರಣ್‌ನಿಂದ ಮಾರಾಟ ಮೇಳ



ದಾವಣಗೆರೆ, ಸೆ. 17 - ನಗರದ ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿರುವ ಏರ್ಪಾಡಾಗಿರುವ ಅಭರಣ್‌ನ ಆಭರಣ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಉಡುಪಿಯ ಪ್ರಸಿದ್ಧ ಆಭರಣ ಬ್ರ್ಯಾಂಡ್, ಅಭರಣ ಜ್ಯುವೆ ಲರ್ಸ್ (ದಿ ಒರಿಜಿನಲ್ ಅಭರಣ) ಆಭರಣಗಳ ಪ್ರದರ್ಶನ, ಮಾರಾಟಕ್ಕೆ ನಾಳೆ ಭಾನುವಾರ ಕೊನೆಯ ದಿನ. ಕರಕುಶಲತೆಯ ವಿಶೇಷವಾದ ಉತ್ತಮ ಆಭರಣಗಳ ಹೊಸ ಪ್ರಪಂಚವನ್ನು ಬೆರಗುಗೊಳಿಸುವ ವ್ಯಾಪಕ ಶ್ರೇಣಿ ವಿನ್ಯಾಸಗಳಲ್ಲಿ ಅನ್ವೇಷಿಸಬಹುದು. ಈ ಪ್ರದರ್ಶನವು ಎಲ್ಲರಿಗೂ ಮುಕ್ತವಾಗಿದೆ.

## ಇಂದು ವಿಷ್ಣುವರ್ಧನ್ ವೃತ್ತ ಉದ್ಘಾಟನೆ

ವರ್ತುಲ ರಸ್ತೆಯ ಭೂತಪ್ಪ ದೇವಸ್ಥಾನ ಬಳಿ ಕುಂದುವಾಡ ರಸ್ತೆ ವೃತ್ತಕ್ಕೆ ಡಾ.ವಿಷ್ಣುವರ್ಧನ್ ವೃತ್ತ ಎಂದು ನಾಮಕರಣ ಮಾಡಲಾಗಿದ್ದು, ಇಂದು ಬೆಳಿಗ್ಗೆ 10 ಗಂಟೆಗೆ ವೃತ್ತದ ಉದ್ಘಾಟನೆ ಮತ್ತು ಸಾಹಸ ಸಿಂಹ ವಿಷ್ಣುವರ್ಧನ್ ಅವರ ಜನ್ಮ ದಿನದ ಆಚರಣೆ ಮಾಡಲಾಗುವುದು ಎಂದು ವಾರ್ಡ್‌ನ ಮಹಾನಗರಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಮತ್ತು ವಿಷ್ಣುವರ್ಧನ್ ಅಭಿಮಾನಿ ಉಮೇಶ್ ತಿಳಿಸಿದ್ದಾರೆ.

# ಜಗಳೂರು : ರೋಗಿಗಳಿಗೆ ಹಣ್ಣು ವಿತರಣೆ



ಜಗಳೂರು, ಸೆ. 17- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ್ಮ ದಿನದ ಅಂಗವಾಗಿ ಇಂದು ಇಲ್ಲಿನ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಶಾಸಕ ಎಸ್ ವಿ ರಾಮಚಂದ್ರ ಹಣ್ಣು , ಬ್ರೆಡ್ ವಿತರಿಸಿದರು.

ಪ್ರಧಾನ ಮಂತ್ರಿ ಮೋದಿಜಿ ಅವರು ಬಡವರ ಹಾಗೂ ಶೋಷಿತರ ಆರ್ಥಿಕ ಅಭಿವೃದ್ಧಿಗಾಗಿ ಮತ್ತು ದೇಶದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದು ಶಾಸಕರು ಹೇಳಿದರು.

**ಸೇವಾ ಪಾಕ್ಷಿಕ :** ಈ ಕಾರ್ಯಕ್ರಮಕ್ಕೆ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಗಳೂರು ಬಿಜೆಪಿ ಮಂಡಲ ಅಧ್ಯಕ್ಷ ಎಚ್. ಸಿ. ಮಹೇಶ್, ಪ್ರಧಾನಮಂತ್ರಿ ಮೋದಿ ಅವರ ಜನ್ಮ ದಿನಾಚರಣೆಯನ್ನು ಸೇವಾ ಪಾಕ್ಷಿಕವಾಗಿ 15 ದಿನಗಳ ನಿರಂತರ ಜನಪರ ಚಟುವಟಿಕೆಗಳನ್ನು ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ತಿಳಿಸಿದರು.

ಇಂದಿನಿಂದ ಬರುವ ಅಕ್ಟೋಬರ್ ಎರಡರ ವರೆಗೆ ಮಂಡಲದ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ, ಸಸಿ ನೆಡುವ ಕಾರ್ಯಕ್ರಮ, ರಕ್ತದಾನ ಶಿಬಿರ ಮುಂತಾದ ಸೇವಾ ಕಾರ್ಯ ಕ್ರಮಗಳನ್ನು ಪಕ್ಷದ ವಿವಿಧ ಮೋರ್ಚಾಗಳ ಆಶ್ರಯದಲ್ಲಿ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಡಿ.ವಿ ನಾಗಪ್ಪ, ಮಂಡಲ್ ಪ್ರಧಾನ ಕಾರ್ಯದರ್ಶಿ ಬಸವರಾಜ್, ನವೀನ್ ಕುಮಾರ್, ಪಟ್ಟಣ ಪಂಚಾಯತ್ ಅಧ್ಯಕ್ಷರಾದ ವಿಶಾಲಾಕ್ಷಿ, ಉಪಾಧ್ಯಕ್ಷೆ ನಿರ್ಮಲ ಕುಮಾರಿ ಸದಸ್ಯ ಆರ್, ತಿಪ್ಪೇಸ್ವಾಮಿ, ಪಾಪಲಿಂಗಪ್ಪ ಮುಖಂಡ ಕೆ.ಬಿ. ಸಿದ್ದೇಶ್, ಶಿವಕುಮಾರ ಸ್ವಾಮಿ, ಬಿ ರವಿಕುಮಾರ್ ,ಬಿಸ್ತುವಳ್ಳಿ ಬಾಬು, ಇದ್ದರು.

# ಆರ್ಥಿಕ ಅಭಿವೃದ್ಧಿ ಜೊತೆಗೆ ಸಾಂಸ್ಕೃತಿಕವಾಗಿಯೂ ಪ್ರಗತಿ ಸಾಧಿಸಿ



## ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಕರೆ

ಮಲೇಬೆನ್ನೂರು, ಸೆ.17 - ಕೇವಲ ಆರ್ಥಿಕವಾಗಿ ಅಭಿವೃದ್ಧಿಯಾದರೆ ಅದು ನಿಜವಾದ ಅಭಿವೃದ್ಧಿ ಅಲ್ಲ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿಯೂ ನಾವು ಪ್ರಗತಿ ಸಾಧಿಸಬೇಕೆಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾನವ ಬಂಧುತ್ವ ವೇದಿಕೆಯ ಸಂಸ್ಥಾಪಕ ಸತೀಶ್ ಜಾರಕಿಹೊಳಿ ಯುವಕರನ್ನು ಹುರಿದುಂಬಿಸಿದರು.

ಅವರು, ಶನಿವಾರ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಡಾ. ಬಾಬು ಜಗಜೀವನ್ ರಾಮ್ ಆದಿ ಜಾಂಬವ ಯುವ ಬ್ರಿಗೇಡ್ ವತಿಯಿಂದ 2 ದಿನಗಳ ಕಾಲ ಹಮ್ಮಿಕೊಂಡಿದ್ದ ಉದ್ಯಮಶೀಲತಾ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಆದಿಜಾಂಬವ ಸಮುದಾಯದ ಯುವಕರು ಉದ್ಯಮ ಶೀಲತೆಗೆ ಆಸಕ್ತಿ ತೋರುತ್ತಿರುವುದು ಆಶಾದಾಯಕವಾಗಿದ್ದು, ಈವರೆಗೂ ಮಲೀನ ವೃತ್ತಿಗಳನ್ನೇ ಮಾಡಿಕೊಂಡು ಬಂದುದ್ದರ ಫಲವಾಗಿ ಬಡತನ, ದಾರಿದ್ರ್ಯದಿಂದ ನರಳುವಂತಾಗಿದೆ. ಎರಡು ಸಾವಿರ ವರ್ಷಗಳಿಂದ ಶೋಷಣೆಗೆ ಒಳಗಾದವರು ಇನ್ನಾದರೂ ಸಾಂಪ್ರದಾಯಿಕ ಕುಲಕಸಬುಗಳನ್ನು ಧಿಕ್ಕರಿಸಿ, ಹೊಸ ಬದುಕಿನ ಹೊಂಗಿರಣಗಳಾಗಬೇಕು. ನೀವು ಸ್ವತಂತ್ರವಾಗಿ ಉದ್ಯಮಗಳನ್ನು ಆರಂಭಿಸಿದರೆ, ಅನೇಕರಿಗೆ ಆಸರೆ ಆಗಲು ಸಾಧ್ಯವಾಗುತ್ತದೆ ಎಂದು ಸತೀಶ್ ಹೇಳಿದರು.

ಬುದ್ಧ, ಬಸವ, ಅಂಬೇಡ್ಕರ್, ಜ್ಯೋತಿ ಬಾಪುಲೆ ಅವರ ವಿಚಾರಧಾರೆಗಳನ್ನು ನಮ್ಮ ಬದುಕಿನ ಭಾಗವಾಗಿಸಿಕೊಳ್ಳಬೇಕು. ವಿಚಾರ ಶೀಲತೆ ಇಲ್ಲದೆ ಹೋದರೆ, ನಾವು ಗಳಿಸುವ ಹಣಕ್ಕೆ ಪೈಶಾಚಿಕ ಗುಣ ಬಂದುಬಿಡುತ್ತದೆ. ಆದ್ದರಿಂದ ನಿಮ್ಮಲ್ಲಿ ವೈಚಾರಿಕ ಕ್ರಾಂತಿಯೂ ಆಗಬೇಕೆಂದು ಯುವಕರಿಗೆ ಕಿವಿಮಾತು ಹೇಳಿದರು.

ಆದಿ ಜಾಂಬವ ಯುವ ಬ್ರಿಗೇಡ್ ರಾಜಾಧ್ಯಕ್ಷ ಏಳುಕೋಟೆಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃಷ್ಣಪ್ಪ ಭವನದ ಟ್ರಸ್ಟಿ ರುದ್ರಪ್ಪ ಹನಗವಾಡಿ, ಪ್ರಗತಿಪರ ಚಿಂತಕ ಡಾ. ಎ.ಬಿ.ರಾಮಚಂದ್ರಪ್ಪ, ಮುಖಂಡರಾದ ಕೆ.ಪಿ. ಪಾಲಯ್ಯ, ಹೊದಿಗೆರೆ ರಮೇಶ್, ಹುಲ್ಲುಮನಿ ಗಣೇಶ್, ಸೀಮೆಎಣ್ಣೆ ಮಲ್ಲೇಶ್, ತರಕಾರಿ ಚಂದ್ರಪ್ಪ, ಕುಕ್ಕುವಾಡ ಮಂಜುನಾಥ್, ಜಿಗಳಿ ಆನಂದಪ್ಪ, ನಂದಿಗಾವಿ ಶ್ರೀನಿವಾಸ್, ಪಾರ್ವತಿ, ಜಿಗಳಿ ಪ್ರಕಾಶ್, ಕೊಕ್ಕನೂರು ಸೋಮಶೇಖರ್, ಸಿರಿಗೆರೆ ಪರಶುರಾಮ್, ಉಕ್ಕಡಗಾತ್ರಿ ಮಂಜು, ಹರಳಹಳ್ಳಿ ಮಂಜು, ಸಂತೋಷ್ ನೋಟಗಾರ್, ಸಾಬೀರ್ ಅಲಿ, ಜಿಗಳಿ ಮಂಜಣ್ಣ ಮತ್ತಿತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಎಸ್ಸೆಸ್ಸೆಂ ಸ್ಕೇಟಿಂಗ್ ಟ್ರೋಫಿ ಪಂದ್ಯಾವಳಿ

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ 55ನೇ ಜನುಮ ದಿನದ ಪ್ರಯುಕ್ತ ನಗರದ ಎಂಸಿಸಿ 'ಬಿ' ಬ್ಲಾಕ್‌ನ ಈಜುಕೊಳ ಹಿಂಭಾಗದಲ್ಲಿನ ಸ್ಕೇಟಿಂಗ್ ತರಬೇತಿ ಕೇಂದ್ರದಲ್ಲಿ ಇಂದು ಎಸ್.ಎಸ್. ಮಲ್ಲಿಕಾರ್ಜುನ್ ಸ್ಕೇಟಿಂಗ್ ಟ್ರೋಫಿ ಪಂದ್ಯಾವಳಿ ನಡೆಯಲಿದೆ.

ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಪ್ರಾಯೋಜಕತ್ವದಲ್ಲಿ ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲ್ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಈ ಸ್ಪರ್ಧೆ ಏರ್ಪಡಿಸಲಾಗಿದ್ದು, ಮಕ್ಕಳಿಗೆ ಸ್ಕೇಟಿಂಗ್ ರಿಲೆ ಹಾಗೂ ಸ್ಕೇಟಿಂಗ್ ರೋಲ್ ಬಾಲ್ ಸ್ಪರ್ಧೆ ನಡೆಯಲಿದ್ದು, 4 ರಿಂದ 16ವರ್ಷದೊಳಗಿನ ಮಕ್ಕಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಬಹುದು. ಇಂದು ಸಂಜೆ 5 ರಿಂದ 7.30ರವರೆಗೆ ಸ್ಪರ್ಧೆ ನಡೆಯಲಿದ್ದು, ಬೆಳಿಗ್ಗೆ 10 ರಿಂದ ನೋಂದಣಿ ಕಾರ್ಯ ಪ್ರಾರಂಭವಾಗಲಿದೆ ಎಂದು ಅಸೋಸಿಯೇಷನ್ ಉಪಾಧ್ಯಕ್ಷ ಗಣೇಶ್ ಶಾಮನೂರು (8722605443) ತಿಳಿಸಿದ್ದಾರೆ.

## ಸಿದ್ದವೀರಪ್ಪ ಬಡಾವಣೆಯಲ್ಲಿ ರಕ್ತದಾನ

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 55ನೇ ಜನ್ಮದಿನದ ಪ್ರಯುಕ್ತ ಭದ್ರಾ ಕಾಲೇಜಿನಲ್ಲಿ ರಕ್ತ ದಾನ ಶಿಬಿರ ನಡೆಯಲಿದೆ ಎಂದು ನಗರಸಭೆ ಮಾಜಿ ಸದಸ್ಯರಾದ ಶ್ರೀಮತಿ ವಿಜಯ ಲಿಂಗರಾಜ್ ತಿಳಿಸಿದ್ದಾರೆ.

# ಇಂದು ಆರ್ಟ್ ಆಫ್ ಲಿವಿಂಗ್‌ನಿಂದ ಕಾರ್ಯಾಗಾರ



ಆರ್ಟ್ ಆಫ್ ಲಿವಿಂಗ್ (ದಾವಣಗೆರೆ) ಇವರ ವತಿಯಿಂದ ಆರೋಗ್ಯ ಮತ್ತು ಸಂತೋಷದ ಕಾರ್ಯಾಗಾರ ಮತ್ತು ಧ್ಯಾನ ಉಚಿತ ಕಾರ್ಯಕ್ರಮವು ಇಂದು ಬೆಳಿಗ್ಗೆ 11:30ರಿಂದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಕಾರ್ಯಾಗಾರದಲ್ಲಿ ಉಸಿರಾಟ ಮತ್ತು ಆರೋಗ್ಯದ ಬಗ್ಗೆ ಕಿರುಪರಿಚಯ ಹಾಗೂ ಧ್ಯಾನದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದು ಪ್ರತಿಷ್ಠಾನದ ಶಿಕ್ಷಕ ಕಿರಣ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ಮೊ: 9900507877,7760155659.

# ಲಾಭದ ಜೊತೆಗೆ ಎನ್‌ಪಿಎ ಇಳಿಕೆಯಲ್ಲಿ ದಾವಣಗೆರೆ ಅರ್ಬನ್ ಬ್ಯಾಂಕ್ ಸಾಧನೆ

**(3ನೇ ಪುಟದಿಂದ)** ಮಾಡಿದರು. ಷೇರುದಾರರಿಗೆ ಶೇ. 20ರಂತೆ ಲಾಭಾಂಶ ನೀಡುವಂತೆ ಸಭೆಯಲ್ಲಿ ಸದಸ್ಯರಿಂದ ಕೇಳಿ ಬಂದ ಬೇಡಿಕೆಯನ್ನು ಪ್ರಸ್ತಾಪಿಸಿ ಮಾತನಾಡಿದ ಉಮಾಪತಿ, ಸಹಕಾರಿ ಬ್ಯಾಂಕುಗಳಿಗೆ ಕಾಯ್ದೆ, ನಿಯಮ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳತ್ತ ಹೆಚ್ಚು ಗಮನ ಹರಿಸಬೇಕಾದ ಅನಿವಾರ್ಯತೆ ಒಂದೆಡೆ ಇದ್ದರೆ, ಇನ್ನೊಂದೆಡೆ ಬ್ಯಾಂಕಿನ ವ್ಯವಹಾರ ಅಭಿವೃದ್ಧಿ, ವೈವಿಧ್ಯತೆ ಮತ್ತು ಲಾಭದ ಕಡೆ ಗಮನ ನೀಡಬೇಕಾದ ಅವಶ್ಯಕತೆಯೂ ಇದೆ ಎಂದು ಸದಸ್ಯರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು.

**ವಿದ್ಯುಚ್ಛಕ್ತಿ ಉಳಿತಾಯ :** ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಮಾತನಾಡಿ, ದಾವಣಗೆರೆ ಅರ್ಬನ್ ಬ್ಯಾಂಕ್ ಹೊಂದಿರುವ ನಾಲ್ಕೂ ಸ್ವಂತ ಕಟ್ಟಡಗಳಲ್ಲಿ ಸೋಲಾರ್ ಪ್ಯಾನೆಲ್ ಅಳವಡಿಸಲಾಗಿದ್ದು, ಇದರಿಂದ ವಿದ್ಯುಚ್ಛಕ್ತಿ ವೆಚ್ಚದಲ್ಲಿ ಉಳಿತಾಯವಾಗಿರುವುದು ಗಮನಾರ್ಹವಾಗಿದೆ ಎಂದರು.

**ಐಎಂಪಿಎಸ್ :** ಬ್ಯಾಂಕಿನ ಹಿರಿಯ ನಿರ್ದೇಶಕರೂ ಆಗಿರುವ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್ ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನದ ಅವಶ್ಯಕತೆಯನ್ನು ಅರಿತು ಇಮಿಡಿ ಯಟ್ ಪೇಮೆಂಟ್ ಸರ್ವೀಸ್ (IMPS) ಸೌಲಭ್ಯವನ್ನು ಗ್ರಾಹಕರಿಗೆ ಒದಗಿಸಲು ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಲೋಕಾರ್ಪಣೆ ಮಾಡಲಾಗುವುದು. ಅಲ್ಲದೇ, ಬ್ಯಾಂಕಿನ ಮೊಬೈಲ್ ಆಪ್‌ನಲ್ಲಿ ಆರ್‌ಟಿಜಿಎಸ್ / ನೆಫ್ಟ್ ಮಾಡುವ ಅವಕಾಶವನ್ನು ನೀಡಲಾಗಿದ್ದು, ಗ್ರಾಹಕರು ಸದುಪಯೋಗಪಡಿಸಿಕೊಳ್ಳುವಂತೆ ಕೇಳಿಕೊಂಡರು.

ನಿರ್ದೇಶಕ ಮಂಡಳಿಯು 2022-23ನೇ ಸಾಲಿಗೆ ರೂಪಿಸಿರುವ ಕಾರ್ಯ ಚಟುವಟಿಕೆಗಳ ವಿವರವನ್ನು ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯಕುಮಾರ್ ಸಭೆಗೆ ನೀಡಿದರು. ಕಾರ್ಯನಿರ್ವಾಹಕ ಮಂಡಳಿಯವರು ತಯಾರಿಸಿರುವ 61ನೇ ವಾರ್ಷಿಕ ವರದಿಯನ್ನು ವೃತ್ತಿಪರ ನಿರ್ದೇಶಕರಾದ ಲೆಕ್ಕ ಪರಿಶೋಧಕ ಮುಂಡಾಸ್ ವೀರೇಂದ್ರ ಓದಿದರು.

ಮತ್ತೋರ್ವ ವೃತ್ತಿಪರ ನಿರ್ದೇಶಕರಾದ ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಕಣವಿ ಅವರು ಬ್ಯಾಂಕಿನ ಉಪ ನಿಯಮಗಳ ತಿದ್ದುಪಡಿಯ ಮಾಹಿತಿಯನ್ನು ಸಭೆಗೆ ಮಂಡಿಸಿ, ಅನುಮೋದನೆ ಪಡೆದರು.

ನಿರ್ದೇಶಕರುಗಳಾದ ವರ್ತಕ ಪಲ್ಲಾಗಟ್ಟಿ ಶಿವಾನಂದಪ್ಪ, ವ್ಯವಸ್ಥಾಪನಾ ಮಂಡಳಿ ಸದಸ್ಯರೂ ಆಗಿರುವ ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಬೆಳ್ಳಿ ಬಂಗಾರದ ವರ್ತಕ ನಲ್ಲೂರು ಎಸ್. ರಾಘವೇಂದ್ರ, ವಿ. ವಿಕ್ರಂ, ಶ್ರೀಮತಿ ಎ.ಆರ್. ಅರ್ಚನಾ, ವ್ಯವಸ್ಥಾ ಪನಾ ಮಂಡಳಿ ಸದಸ್ಯರುಗಳಾದ ಹಿರಿಯ ಲೆಕ್ಕ ಪರಿಶೋಧಕ ಬಸವರಾಜಪ್ಪ ಬೆಳಗಾವಿ, ಸಾಫ್ಟ್‌ವೇರ್ ಇಂಜಿನಿಯರ್ ಕೆ. ಕೊಟ್ರೇಶ್, ತೆರಿಗೆ ಸಲಹೆಗಾರ ಜೆಂಬಿಗಿ ರಾಧೇಶ್ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸದಸ್ಯರುಗಳಾದ ಜೆ. ಸೋಮನಾಥ್, ಮೋತಿ ಟಿ. ಶಂಕ್ರಪ್ಪ, ಟಿ.ಜೆ. ಸುರೇಶ್, ಹೆಚ್.ಎಂ. ರುದ್ರಮುನಿಸ್ವಾಮಿ, ಜಿ. ಶಿವಯೋಗಪ್ಪ, ಬೆಳ್ಳೂಡಿ ಶಿವಕುಮಾರ್, ಮಾಗಿ ಜಯಪ್ರಕಾಶ್, ಪಿ.ಕೆ. ವೀರಣ್ಣ, ಎಸ್.ಎನ್. ಪ್ರಕಾಶ್ ಕುಮಾರ್, ಬಿ.ಹೆಚ್. ಪರಶುರಾಮಪ್ಪ, ವಾಲಿ ಲಿಂಗರಾಜು, ಸಿದ್ದಲಿಂಗೇಶ್, ಪಿ.ಓ. ರೇವಣಸಿದ್ದಪ್ಪ ಆಲೂರು ಮತ್ತಿತರರು ಬ್ಯಾಂಕಿನ ಪ್ರಗತಿ ಕುರಿತಂತೆ ಹಲವಾರು ಪ್ರಶ್ನೆಗಳನ್ನು ಕೇಳಿದರಲ್ಲದೇ, ಸಲಹೆ-ಸೂಚನೆಗಳನ್ನು ನೀಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ಸಂಗೀತ ಶಿಕ್ಷಕಿ ಶ್ರೀಮತಿ ರುದ್ರಾಕ್ಷಿಬಾಯಿ ನಾಡಗೀತೆ ಹಾಡಿದರು. ಬಂಜಾರ ಜಾನಪದ ಅಕಾಡೆಮಿ ಸದಸ್ಯರಾದ ಉಮೇಶ್ ನಾಯ್ಕ್ ಚಿನ್ನಸಮುದ್ರ ಅವರು ಜಾನಪದ ಹಾಡುಗಳೊಂದಿಗೆ ಗಮನ ಸೆಳೆದರು. ವಾರ್ತಾ ಮತ್ತು ಪ್ರಚಾರ ಇಲಾಖೆಯ ಹಿರಿಯ ನೌಕರ ಬಿ.ಎಸ್. ಬಸವರಾಜ್ ಭಕ್ತಿಗೀತೆಗಳನ್ನು ಹಾಡಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ ಮತ್ತು ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಶ್ರೀಮತಿ ಡಿ.ಇ. ಸಿಂಧು ಅವರ ಪ್ರಾರ್ಥನೆ ನಂತರ ನಿರ್ದೇಶಕರೂ ಆಗಿರುವ ವ್ಯವಸ್ಥಾಪನಾ ಮಂಡಳಿ ಸದಸ್ಯ ಕಂಚಿಕೇರಿ ಮಹೇಶ್ ಸ್ವಾಗತಿಸಿದರು. ಹಿರಿಯ ನಿರ್ದೇಶಕ ಎಂ. ಚಂದ್ರಶೇಖರ್ ಅವರಿಂದ ವಂದನಾರ್ಪಣೆ, 'ಜನತಾವಾಣಿ' ಉಪ ಸಂಪಾದಕರೂ ಆದ ನಿರ್ದೇಶಕ ಇ.ಎಂ. ಮಂಜುನಾಥ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಬ್ಯಾಂಕಿನ ವ್ಯವಸ್ಥಾಪಕರುಗಳಾದ ಆಡಳಿತ ಕಛೇರಿ ಸಾಲ ವಿಭಾಗದ ಆರ್.ವಿ. ಪ್ರಸನ್ನ, ಪ್ರಧಾನ ಕಛೇರಿಯ ಸಾನಂದ ಗಣೇಶ್, ಚೌಕಿಪೇಟೆ ಶಾಖೆಯ ಜಿ.ಕೆ. ವಿಜಯಕುಮಾರ್, ನರಸರಾಜ ರಸ್ತೆ ಶಾಖೆಯ ಕೆ.ಎಸ್. ಕರಿಬಸವರಾಜ್, ಪಿ.ಜೆ. ಬಡಾವಣೆ ಶಾಖೆಯ ಶ್ರೀಮತಿ ಎಲ್.ಎಸ್. ಗೀತಾ, ದೇವರಾಜ ಅರಸು ಬಡಾವಣೆ ಶಾಖೆಯ ಹೆಚ್.ವಿ. ರುದ್ರೇಶ್, ಹೊನ್ನಾಳಿ ಶಾಖೆಯ ಹೆಚ್. ಕುಮಾರ್, ಆಡಳಿತ ಕಛೇರಿಯ ಡಿಬಿಎ ಬಿ.ಎಸ್. ಪ್ರಶಾಂತ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

# ಸ್ಟೇಡಿಯಂನಲ್ಲಿ ಇಂದು ರಕ್ತದಾನ ಶಿಬಿರ

ಎಸ್ಸೆಸ್ಸೆಂ ಜನ್ಮದಿನದ ಹಿನ್ನೆಲೆಯಲ್ಲಿ ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್ ಮತ್ತು ಕೆಟಿಜೆ ನಗರ ವತಿಯಿಂದ ರಕ್ತದಾನ ಶಿಬಿರವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 10 ರಿಂದ ಆರಂಭವಾಗುವ ಈ ಶಿಬಿರವನ್ನು ಬಾಪೂಜಿ ವಿದ್ಯಾಸಂಸ್ಥೆಯ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್‌ನ ದಿನೇಶ್ ಕೆ.ಶೆಟ್ಟಿ, ಶಿವಗಂಗಾ ಶ್ರೀನಿವಾಸ್, ಹೆಚ್. ಮಹಾದೇವ್, ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ ಅವರುಗಳು ತಿಳಿಸಿದ್ದಾರೆ.

## ದಸರಾ : ನಗರದೇವತೆ ದುಗ್ಗಮ್ಮ ದೇವಸ್ಥಾನದಲ್ಲಿಂದು ಸಭೆ

ದಸರಾ ಹಬ್ಬದ ಆಚರಣೆ ಕುರಿತಂತೆ ಚರ್ಚಿಸಲು ಇಂದು ಸಂಜೆ 5 ಗಂಟೆಗೆ ಪ್ರಸಾದ ನಿಲಯದಲ್ಲಿ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್‌ನ ಧರ್ಮದರ್ಶಿಗಳ ಸಭೆ ನಡೆಯಲಿದೆ. ಶಾಸಕ ಶಾಮನೂರು ಶಿವಶಂಕರಪ್ಪ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


**WANTED**

Required Computer Operator for the purpose of Billing - Male or Female
Interested can apply with Resume along with Passport Size Photo Attested

**ASHUJI DISTRIBUTORS**
#323, Binny Company Road, Davangere.

## ವಾಟ್ಸ್‌ಆಪ್‌ನಿಂದ ಆಟೋಮೊಬೈಲ್ ಕಂಪನಿಗೆ ಕೋಟಿ ರೂ. ವಂಚನೆ

ಗುರುಗ್ರಾಮ, ಸೆ. 17 – ವಂಚಕರು ನಕಲಿ ವಾಟ್ಸ್‌ಅಪ್ ಮೆಸೇಜ್‌ಗಳನ್ನು ಕಳಿಸಿ ಜನಪ್ರಿಯ ಆಟೋಮೊಬೈಲ್ ಕಂಪನಿಯೊಂದಕ್ಕೆ 1 ಕೋಟಿ ರೂ. ವಂಚನೆ ಮಾಡಿದ್ದಾರೆ. ಕಂಪನಿಯ ಮುಖ್ಯ ಹಣಕಾಸು ಅಧಿಕಾರಿಗೆ ಕಂಪನಿಯ ಉಪಾಧ್ಯಕ್ಷರ ಹೆಸರಿನಲ್ಲಿ ಮೆಸೇಜ್ ಕಳಿಸಿ ಈ ವಂಚನೆ ಮಾಡಲಾಗಿದೆ.

ಒಟ್ಟು ಏಳು ಬ್ಯಾಂಕ್ ಖಾತೆಗಳಿಗೆ ಹಣ ಕಳಿಸಲಾಗಿದೆ. ಈ ಬಗ್ಗೆ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜೆ.ಬಿ.ಎಂ. ಸಮೂಹದ ಮುಖ್ಯ ಹಣಕಾಸು ಅಧಿಕಾರಿ ವಿವೇಕ್ ಗುಪ್ತ ಅವರು ವಂಚನೆಯ ಬಗ್ಗೆ ಶುಕ್ರವಾರ ದೂರು ದಾಖಲಿಸಿದ್ದಾರೆ.

ಜೆ.ಬಿ.ಎಂ. ಸಮೂಹದ ಉಪಾಧ್ಯಕ್ಷ ನಿಶಾಂತ್ ಆರ್ಯ ಹೆಸರಿನಲ್ಲಿ ವಾಟ್ಸ್‌ಆಪ್ ಮೆಸೇಜ್ ಕಳಿಸಿ, ಕೆಲ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡುವಂತೆ ತಿಳಿಸಲಾಗಿತ್ತು. ಅದರಂತೆ ಏಳು ಬ್ಯಾಂಕ್ ಖಾತೆಗಳಿಗೆ 1,11,71,696 ರೂ.ಗಳನ್ನು ಜಮಾ ಮಾಡಲಾಗಿದೆ. ನಂತರದಲ್ಲಿ ವಂಚನೆಯಾಗಿರುವುದು ಬೆಳಕಿಗೆ ಬಂದಿದೆ.


## ಸ್ನೇಹಾಲಯ ವಸತಿ ಗೃಹ

(ಕಾರ್ಯನಿರತ ಮಹಿಳೆಯರಿಗೆ ವಸತಿ ಸೌಲಭ್ಯ)

ಎಂಸಿಸಿ ಬ್ಲಾಕ್, ದಾವಣಗೆರೆ.

ಸ್ನೇಹಾಲಯ ದಾವಣಗೆರೆ ನಗರದ ಮಧ್ಯಭಾಗದಲ್ಲಿದೆ.

ಆಧುನಿಕ ಸೌಲಭ್ಯಗಳಿರುವ ಸುಸಜ್ಜಿತ ಕೊಠಡಿಗಳು ಬಾಡಿಗೆಗೆ ಇವೆ.

ಸೂಚನೆ : ಕಾರ್ಯನಿರತ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು.
ಸಸ್ಯಹಾರಿಗಳಿಗೆ ಮಾತ್ರ ಅವಕಾಶ

ಸಂಪರ್ಕಿಸಬೇಕಾದ ಸಂಖ್ಯೆ : 97425 81628


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಗುರು-ಲಿಂಗ-ಜಂಗಮಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ಆಂಜನೇಯ ಬಡಾವಣೆ, 11ನೇ ಕ್ರಾಸ್ ವಾಸಿ, ಶ್ರೀ ಲಿಂ|| ಬಿ.ಎಂ. ವೀರಯ್ಯ ಇವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 11.09.2022 ನೇ ಭಾನುವಾರ ಬೆಳಿಗ್ಗೆ 9.30ಕ್ಕೆ ನಮ್ಮ ಮಗನಾದ



### ಶ್ರೀ ಬಿ.ಎಂ. ಗಣೇಶಯ್ಯ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಗುರು-ಲಿಂಗ-ಜಂಗಮಾರಾಧನೆ'ಯನ್ನು
ದಿನಾಂಕ 19.09.2022ನೇ ಸೋಮವಾರ ಬೆಳಿಗ್ಗೆ 11-30 ಕ್ಕೆ ದಾವಣಗೆರೆ ಸಿಟಿ ಆಂಜನೇಯ ಬಡಾವಣೆ, 11ನೇ ಕ್ರಾಸ್, ಎಂ.ಇ.ಎಸ್. ಕಾನ್ವೆಂಟ್ ಹತ್ತಿರವಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ತಾಯಿ ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು,
ಶ್ರೀಮತಿ ಅನಿತಾ ಮತ್ತು ಮಕ್ಕಳು, ವೀರೇಶ್ ಹೆಚ್.ಎಂ.
ಶ್ರೀಮತಿ ಸುಮಾ ಮಲ್ಲೇಶ್ ಗುಪ್ತ ಹಾಗೂ ಬಂಧು-ಮಿತ್ರರು.
ಮೊ. : 8904941054, 9945417541

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ.,

1ನೇ ಮಹಡಿ, ಹಳೇ ಮಹಾರಾಷ್ಟ್ರ ಬ್ಯಾಂಕ್ ಬಿಲ್ಡಿಂಗ್, ಪಿ.ಬಿ. ರಸ್ತೆ, ಹರಿಹರ.

### 2021-22ನೇ ಸಾಲಿನ ಎಂಟನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ



ನಾಗರಾಜ ಹೆಚ್.ಎಂ.
ಅಧ್ಯಕ್ಷರು

ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ., ಹರಿಹರ ಇವರ 8ನೇ ವಾರ್ಷಿಕ ಮಹಾಸಭೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ: 18.09.2022ನೇ ಭಾನುವಾರ ಮಧ್ಯಾಹ್ನ 12.00 ಘಂಟೆಗೆ ಹರಿಹರದ ರಚನಾ ಕ್ರೀಡಾ ಕ್ಲಬ್, ಗಾಂಧಿ ಮೈದಾನದಲ್ಲಿ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.



ಡಾ. ಪ್ರವೀಣ ಹೆಗಡೆ.
ಉಪಾಧ್ಯಕ್ಷರು

### ಪದಾಧಿಕಾರಿಗಳು :



ವೀರಣ್ಣ ಜಿ.ಕೆ. ನಿರ್ದೇಶಕರು | ಮಂಜುನಾಥ್ ಹೆಚ್.ಎಸ್. ನಿರ್ದೇಶಕರು | ನಂಜಪ್ಪ ಜಿ. ನಿರ್ದೇಶಕರು | ಸುಜಯ್ ಹೆಚ್.ವಿ. ನಿರ್ದೇಶಕರು | ಮಯೂರ್ ಹೆಚ್.ಎನ್. ನಿರ್ದೇಶಕರು



ರಾಘವೇಂದ್ರ ಬೊಂಗಾಳೆ ನಿರ್ದೇಶಕರು | ಡಾ. ಸೀಮಾ ಎಸ್. ನಿರ್ದೇಶಕರು | ಶ್ರೀಮತಿ ಸುನಿತಾ ಪಿ. ಬದ್ದಿ ನಿರ್ದೇಶಕರು | ಶ್ರೀಮತಿ ನಾಗರತ್ನ ಜಿ.ಕೆ. ನಿರ್ದೇಶಕರು | ಶ್ರೀಮತಿ ಮಂಜುಳಾ ಪ್ರಸಾದ್ ನಿರ್ದೇಶಕರು

**ವಿಶೇಷ ಸೂಚನೆ:**
ಆಮಂತ್ರಣ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಕೋರಿದೆ. ಸಭೆಗೆ ಹಾಜರಾಗುವವರು ಕಡ್ಡಾಯವಾಗಿ ಮಾಸ್ಕ್, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು.

ಆಡಳಿತ ಮಂಡಳಿಯ ಪರವಾಗಿ
ಕೆ.ಜಿ. ಶಿವನಗೌಡ
ಕಾರ್ಯದರ್ಶಿ

ನೋಂದಣಿ ಸಂಖ್ಯೆ : ಸನಿ. 31 / ಆರ್.ಜಿ.ಎನ್. / 40889 / 2011-12 ದಿನಾಂಕ : 30-12-2011

GSTIN 29AAHAS3676A1ZD

## ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 175/2, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ,
ದಾವಣಗೆರೆ-577 001. ಫೋನ್. : 08192-233622

### 11ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ ಇದರ 2021-22ನೇ ಸಾಲಿನ 11ನೇ .ವಾರ್ಷಿಕ ಮಹಾಸಭೆಯನ್ನು ದಿನಾಂಕ : 18-09-2022ನೇ ಭಾನುವಾರ ಬೆಳಗ್ಗೆ 11-30 ಗಂಟೆಗೆ " ತೊಗಟವೀರ ಸಮುದಾಯ ಭವನ " ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ. ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ಪ್ರಗತಿಯ ಪಕ್ಷಿ ನೋಟ (ರೂ. ಲಕ್ಷಗಳಲ್ಲಿ)**

| ವಿವರಗಳು | 31-03-2015 | 31-03-2016 | 31-03-2017 | 31-03-2018 | 31-03-2019 | 31-03-2020 | 31-03-2021 | 31-03-2022 |
|---|---|---|---|---|---|---|---|---|
| 1. ಸದಸ್ಯರು | 1,442 | 1,512 | 1,551 | 1,587 | 1,655 | 1,743 | 1,857 | 1,883 |
| 2. ಷೇರು ಬಂಡವಾಳ | 32,00,800 | 36,98,300=00 | 42,24,800 | 47,00,300=00 | 51,48,300=00 | 56,27,300=00 | 56,23,800=00 | 58,27,300=00 |
| 3. ಕಾಯ್ದಿರಿಸಿದ ನಿಧಿ | 12,26,012 | 30,76,569=00 | 49,64,105 | 70,64,590=32 | 94,26,129=52 | 1,19,82,239=00 | 1,45,29,945=00 | 1,89,94,428=87 |
| 4. ಠೇವಣಿಗಳು | 2,54,19,003 | 3,53,52,437=00 | 3,87,78,916 | 4,53,77,194=61 | 5,62,07,990=39 | 6,22,41,660=00 | 6,69,92,327=00 | 7,19,03,201=00 |
| 5. ಸಾಲಗಳು | 2,58,15,850 | 3,32,40,899=00 | 4,09,80,144 | 4,68,56,657=00 | 5,46,95,819=00 | 7,61,77,192=00 | 6,94,48,520=00 | 7,85,85,230=00 |
| 6. ದುಡಿಯುವ ಬಂಡವಾಳ | 3,19,78,279 | 4,57,63,014=00 | 5,10,22,542 | 6,07,95,018=13 | 7,50,78,200=61 | 8,71,97,476=00 | 9,58,91,771=00 | 10,22,02,977=00 |
| 7. ಲಾಭ / ನಷ್ಟ | ಲಾಭ 17,48,963 | 20,00,088=47 | 23,65,243 | 25,94,749=20 | 28,52,137=80 | 29,87,710=38 | 31,80,123=55 | 34,48,520=91 |
| 8. ಆಡಿಟ್ ವರ್ಗೀಕರಣ | "ಬಿ" ಗ್ರೇಡ್ | "ಎ" ಗ್ರೇಡ್ | "ಎ" ಗ್ರೇಡ್ | "ಎ" ಗ್ರೇಡ್ | "ಎ" ಗ್ರೇಡ್ | "ಎ" ಗ್ರೇಡ್ | "ಬಿ" ಗ್ರೇಡ್ | "ಬಿ" ಗ್ರೇಡ್ |
| 9. ಡಿವಿಡೆಂಡ್ | -------- | ಶೇ. 8 | ಶೇ. 8 | ಶೇ. 8 | ಶೇ. 8 (ಉದ್ದೇಶಿತ) | ಶೇ. 8 (ಉದ್ದೇಶಿತ) | -------- | ಶೇ. 10 (ಉದ್ದೇಶಿತ) |

### -: ಕಾರ್ಯಕಾರಿ ಮಂಡಳಿ :-



ಶ್ರೀ ಡಿ. ಬಸವರಾಜಪ್ಪ, ಅಧ್ಯಕ್ಷರು | ಶ್ರೀ ಆರ್. ಶಂಕರ್ ಉಪಾಧ್ಯಕ್ಷರು | ಶ್ರೀ ಎಸ್. ರುದ್ರಪ್ಪ, ನಿರ್ದೇಶಕರು | ಶ್ರೀ ಎನ್. ಪ್ರಕಾಶ್, ನಿರ್ದೇಶಕರು | ಶ್ರೀ ಎಲ್. ನಾಗರಾಜ, ನಿರ್ದೇಶಕರು | ಶ್ರೀ ಆರ್. ವೆಂಕಟಚಲಮೂರ್ತಿ, ನಿರ್ದೇಶಕರು



ಶ್ರೀ ಎಸ್.ಎಂ. ನಾಗರಾಜನ್ ನಿರ್ದೇಶಕರು | ಶ್ರೀ ಎಲ್.ಎಸ್. ಸುಧಾಕರ್ ನಿರ್ದೇಶಕರು | ಶ್ರೀ ಬಿ.ಪಿ. ಮಂಜುನಾಥ, ನಿರ್ದೇಶಕರು | ಶ್ರೀಮತಿ ಅನಂತಮ್ಮ, ನಿರ್ದೇಶಕರು | ಶ್ರೀಮತಿ ಎನ್.ಹೆಚ್. ಸಾಕಮ್ಮ ನಿರ್ದೇಶಕರು | ಶ್ರೀಮತಿ ಎಸ್. ಸುಮಿತ್ರ ವಿಶೇಷ ಆಹ್ವಾನಿತರು | ಡಿ. ಪಾವನಮೂರ್ತಿ, ಕಾರ್ಯದರ್ಶಿ

ವಿಶೇಷ ಸೂಚನೆ : ಮಾನ್ಯ ಸದಸ್ಯರಿಗೆ ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆಯ ಮೂಲಕ/ಮುದ್ದಾಂ ಕಳುಹಿಸಲಾಗಿದ್ದು ಸಕಾಲಕ್ಕೆ ತಲುಪದೇ ಇದ್ದವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ ಮತ್ತು ಸಭೆಗೆ ಬರುವಾಗ ಗುರುತಿನ ಚೀಟಿ ಮತ್ತು ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ತಪ್ಪದೇ ತರತಕ್ಕದ್ದು

ಸಹಕಾರವೇ ಜೀವನ | ಸ್ಥಾಪನೆ : 1983 | ಜೀವನವೇ ಸಹಕಾರ

## ದಿ ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ರಜತ ಮಹೋತ್ಸವ ಕಟ್ಟಡ, ಶಿವಮೊಗ್ಗ ರಸ್ತೆ, ಹರಿಹರ - 577 601. ದೂರವಾಣಿ : 243108

### ಸಂಘದ 38ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆಹ್ವಾನ

### ಜಿಲ್ಲೆಯಲ್ಲಿಯೇ ಸಹಕಾರ ಸೊಸೈಟಿಯು ಪ್ರಥಮ ಶ್ರೇಣಿಯಲ್ಲಿ 3 ಕೋಟಿ 70 ಲಕ್ಷ ಲಾಭ ಗಳಿಸಿದೆ

ಸಂಘದ 37ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 18.09.2022ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀಮತಿ ಕೆಂಚಮ್ಮ ಶ್ರೀ ಹೆಚ್.ಕೆ. ವೀರಪ್ಪ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಹೇಮಂತ್‌ರಾಜ್ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

### ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರು



ಶ್ರೀ ಡಿ. ಹೇಮಂತರಾಜ್, ಅಧ್ಯಕ್ಷರು | ಶ್ರೀ ಆರ್.ಕೆ. ಮಂಜುನಾಥ, ಉಪಾಧ್ಯಕ್ಷರು | ಶ್ರೀ ಎಂ. ಶಿವಾನಂದಪ್ಪ, (ಸಂಸ್ಥಾಪಕ ಅಧ್ಯಕ್ಷರು), ನಿರ್ದೇಶಕರು | ಶ್ರೀ ಜಿ.ಎಸ್. ಚನ್ನಬಸಪ್ಪ, ನಿರ್ದೇಶಕರು | ಶ್ರೀ ಸೈಯದ್ ಇಫ್ತೇಕಾರ್ ಅಹ್ಮದ್, ನಿರ್ದೇಶಕರು



ಶ್ರೀ ಬಿ. ಮಂಜಪ್ಪ ನಿರ್ದೇಶಕರು | ಶ್ರೀ ಪಿ. ಶಿವಣ್ಣ ನಿರ್ದೇಶಕರು | ಶ್ರೀ ಎಂ. ಹನುಮಂತಪ್ಪ ನಿರ್ದೇಶಕರು | ಶ್ರೀ ಪ್ರಕಾಶ್ ದಿವಟೆ ನಿರ್ದೇಶಕರು | ಶ್ರೀ ಕೆ.ಬಿ. ಮಂಜುನಾಥ್ ನಿರ್ದೇಶಕರು | ಶ್ರೀ ಸಂಜಯ್ ಮಂಜುನಾಥ್ ನಿರ್ದೇಶಕರು



ಶ್ರೀಮತಿ ಎಲ್.ಪಿ. ಮಮತ ನಿರ್ದೇಶಕರು | ಶ್ರೀಮತಿ ಎ.ಬಿ. ಗಂಗಮ್ಮ ನಿರ್ದೇಶಕರು | ರುದ್ರೇಶ್ ಕೆ.ವಿ. ವಿಶೇಷ ಆಹ್ವಾನಿತರು | ಶ್ರೀ ಶಿವಪ್ರಕಾಶ್ ಶಾಸ್ತ್ರಿ ವಿಶೇಷ ಆಹ್ವಾನಿತರು | ಶ್ರೀ ಬಿ.ಜಿ. ಶರತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

**31.3.2022ಕ್ಕೆ ಇದ್ದಂತೆ ಪ್ರಗತಿಯ ಪಕ್ಷಿನೋಟ**

| ಕ್ರ.ಸಂ. | ವಿವರಗಳು | ರೂ. ಕೋಟಿಗಳಲ್ಲಿ |
|---|---|---|
| 1. | ಸದಸ್ಯರು | 5,298 |
| 2. | ಷೇರು ಬಂಡವಾಳ | 3.05 |
| 3. | ಠೇವಣಿಗಳು | 54.30 |
| 4. | ಸಾಲಗಳು | 68.47 |
| 5. | ಕಾಯ್ದಿಟ್ಟ ನಿಧಿ | 15.55 |
| 6. | ಲಾಭ | 3.70 |
| 7. | ಡಿವಿಡೆಂಟ್ | ಉದ್ದೇಶಿತ 16% |
| 8. | ಲೆಕ್ಕ ಪರಿಶೋಧಕರ ವರ್ಗ | 'ಎ' |

**ಸಾಲಗಳ ಮೇಲಿನ ಬಡ್ಡಿ ದರಗಳು**

| | | |
|---|---|---|
| 1. | ಸ್ಥಿರಾಸ್ತಿ ಆಧಾರಿತ ಹಾಗೂ ನಗದುದ್ದರಿ ಸಾಲ (ಓ.ಡಿ.) | ಶೇ. 12 |
| 2. | ವಾಹನಾಧಾರಿತ ಸಾಲ : ಹೊಸ ವಾಹನಗಳಿಗೆ, | ಶೇ. 12 |
| | ಹಳೆಯ ವಾಹನಗಳಿಗೆ | ಶೇ. 12 |
| 3. | ಚಿನ್ನಾಭರಣ ಆಧಾರಿತ ಸಾಲ | ಶೇ. 11 |
| 4. | ಜಾಮೀನು ಆಧಾರಿತ ಸಾಲ | ಶೇ. 16 |
| 5. | ವೇತನಾಧಾರಿತ ಸಾಲ | ಶೇ. 16 |
| 6. | ಬಾಂಡ್ ಆಧಾರಿತ ಸಾಲ | ಶೇ. 12 |

**ಠೇವಣಿಗಳ ಮೇಲಿನ ಬಡ್ಡಿ ದರಗಳು**

| | |
|---|---|
| 30 ದಿನಗಳ ಮೇಲ್ಪಟ್ಟು 90 ದಿನಗಳವರೆಗೆ | ಶೇ. 5.50 |
| 91 ದಿನಗಳ ಮೇಲ್ಪಟ್ಟು 180 ದಿನಗಳವರೆಗೆ | ಶೇ. 6.50 |
| 181 ದಿನಗಳ ಮೇಲ್ಪಟ್ಟು ಮತ್ತು 12 ತಿಂಗಳವರೆಗೆ | ಶೇ.7.50 |
| 12 ತಿಂಗಳ ಮೇಲ್ಪಟ್ಟು 36 ತಿಂಗಳವರೆಗೆ | ಶೇ 8.00 |
| 36 ತಿಂಗಳ ಮೇಲ್ಪಟ್ಟು 99 ತಿಂಗಳವರೆಗೆ | ಶೇ. 8.50 |

12 ತಿಂಗಳ ಮೇಲ್ಪಟ್ಟ ಠೇವಣಿಗಳಿಗೆ ಹಿರಿಯ ನಾಗರಿಕರಿಗೆ ಶೇ. 0.5 ಹೆಚ್ಚುವರಿ ಬಡ್ಡಿಯನ್ನು ಕೊಡಲಾಗುವುದು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಬೇಕಾಗಿ ವಿನಂತಿ. ಸಭೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಬೇಕಾಗಿ ಕೋರಿದೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte